ಕರ್ನಾಟಕ ಸರ್ಕಾರ

**ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-1**

ಸಂಖ್ಯೆ:ಎಡಿಎಂ2/ಪ್ರಾಶಿ/ಶಾ.ಕಾ.ಪ್ರ/1/2021-22 ದಿನಾಂಕ:04/11/2021

**-: ಸುತ್ತೋಲೆ :-**

ವಿಷಯ: ರಾಜ್ಯದಲ್ಲಿನ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿನ ಎಲ್‌ಕೆಜಿ ಮತ್ತು ಯುಕೆಜಿ ತರಗತಿ ವಿದ್ಯಾರ್ಥಿಗಳಿಗೆ ಶಾಲೆಗಳನ್ನು ಭೌತಿಕವಾಗಿ ಪೂರ್ಣ ಪ್ರಮಾಣದಲ್ಲಿ ಪ್ರಾರಂಭ ಮಾಡುವ ಬಗ್ಗೆ~

ಉಲ್ಲೇಖ:
1. ದಿ:06/08/2021, 14/08/2021 ಮತ್ತು 30/08/2021 ರಂದು ಸನ್ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳಂತೆ.
2. ಶಾಲೆಗಳಲ್ಲಿ ಅನುಸರಿಸಬೇಕಾದ ಪ್ರಮಾಣಿತ ಕಾರ್ಯಾಚರಣೆ ವಿಧಾನ (ಎಸ್‌ಒಪಿ)ಸುತ್ತೋಲೆಸಂಖ್ಯೆ:ಡಿ.ಎಸ್.ಇಆರ್.ಟಿ./ಇವಿಜಿ/ಶಾ.ಪ್ರಾ/ಪ್ರ.ಕಾ.ವಿ: 2020-21 ದಿ:11/08/2021.
3. ಈ ಕಛೇರಿಯ ಪತ್ರ ಸಂ:ಎಡಿಎಂ2(1)/ಶೈ.ವ.ನಿ.01/2021-22 ದಿ:10/06/2021.
4. ಡಿ.ಎಸ್.ಇ.ಆರ್.ಟಿ/ಇವಿಜಿ/ಪ.ಶೈ.ಕ್ಯಾ/07/2021-22 ದಿ:30/07/2021
5. ಈ ಕಛೇರಿಯ ಪತ್ರ ಸಂಖ್ಯೆ:ಡಿ.ಎಸ್.ಇ.ಆರ್.ಟಿ/ಇವಿಜಿ/1-10/ಮೌಲ್ಯಾಂಕನ/2021-22, ದಿ:11/08/2021.
6. ಈ ಕಛೇರಿ ಸುತ್ತೋಲೆ ಸಂಖ್ಯೆ:ಸಿ4(6)ಸಪ್ರೌಶಾ/ಶಾ.ಕಾ.ಪ್ರ/23/2020-21, ದಿನಾಂಕ:16/08/2021.
7. ಈ ಕಛೇರಿ ಸುತ್ತೋಲೆ ಸಂಖ್ಯೆ:ಸಿ4(6)ಸಪ್ರೌಶಾ/ಶಾ.ಕಾ.ಪ್ರ/23/2020-21. ದಿನಾಂಕ:31/08/2021.
8. ಈ ಕಛೇರಿಯ ಸುತ್ತೋಲೆ ಸಂಖ್ಯೆ:ಸಿ4(6)ಸಪ್ರೌಶಾ/ಶಾಕಾಪ್ರ/48/2021-22. ದಿನಾಂಕ: 01/10/2021
9. ದಿನಾಂಕ : 12.10.2021ರ ಏಕಕಡತದಲ್ಲಿ ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರ ಅನುಮೋದನೆಯಂತೆ.
10. ಮಾನ್ಯ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ಬೆಂಗಳೂರು, ರವರ ಆದೇಶ ಸಂಖ್ಯೆ:ಆರ್‌ಡಿ:158:ಟಿ.ಎಸ್.ಆರ್:2020 ದಿನಾಂಕ: 18.10.2021.
11. ಈ ಕಛೇರಿ ಪತ್ರ :ಸಿ4(6)ಪ್ರೌಶಿ/ಶಾ.ಕಾ.ಪ್ರ/48/2021-22 ದಿನಾಂಕ:21/10/2021
12. ನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು, ರವರ ಕಛೇರಿ ಸುತ್ತೋಲೆ ಸಂಖ್ಯೆ:ಮಮಇ/ಐಸಿಡಿ/ಸಿಎನ್‌ಪಿ-2/ಅಂ.ಕೇ.ರಜೆ/2021-22. ದಿನಾಂಕ:27/10/2021.

* * *

ಉಲ್ಲೇಖ(1) ರಂತೆ ರಾಜ್ಯದಲ್ಲಿ 2021-22ನೇ ಶೈಕ್ಷಣಿಕ ಸಾಲಿನಲ್ಲಿ ಶಾಲೆಗಳನ್ನು ಭೌತಿಕವಾಗಿ ಪ್ರಾರಂಭಿಸುವ ಕುರಿತು ಸನ್ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಆರೋಗ್ಯ ಸಚಿವರು ಮತ್ತು ಇಲಾಖೆಯ ಕೋವಿಡ್-19 ತಾಂತ್ರಿಕ ಸಲಹಾ ಸಮಿತಿಯ ಸದಸ್ಯರು ಹಾಗೂ ವಿವಿಧ ಇಲಾಖೆಯ ಹಿರಿಯ ಅಧಿಕಾರಿಗಳ ಸಭೆಯಲ್ಲಿ ಚರ್ಚಿಸಿ ದಿನಾಂಕ:23/08/2021 ರಿಂದ ರಾಜ್ಯದಲ್ಲಿ ಕೋವಿಡ್-19ರ ಸೋಂಕಿನ ಪ್ರಮಾಣ 2% ಗಿಂತ ಕಡಿಮೆ ಇರುವ ತಾಲ್ಲೂಕು/ವಲಯಗಳಲ್ಲಿ (ಕೇರಳ ರಾಜ್ಯದೊಡನೆ ಗಡಿ ಹಂಚಿಕೊಂಡಿರುವ ತಾಲ್ಲೂಕುಗಳನ್ನು ಹೊರತುಪಡಿಸಿ) 9 ಮತ್ತು 10ನೇ ತರಗತಿಗಳನ್ನು ಹಾಗೂ ದಿನಾಂಕ : 06/09/2021 ರಲ್ಲಿ 6 ರಿಂದ 8ನೇ ತರಗತಿಗಳನ್ನು ಪ್ರಾರಂಭಿಸಿ, ನಂತರದ ದಿನಗಳಲ್ಲಿ ದಿನಾಂಕ : 04/10/2021 ರಿಂದ 6 ರಿಂದ 10ನೇ ತರಗತಿಗಳನ್ನು ದೈನಂದಿನ ಪೂರ್ಣ ಅವಧಿಗೆ ಪೂರ್ಣ ಪ್ರಮಾಣದಲ್ಲಿ ಪ್ರಾರಂಭಿಸಿ, 1 ರಿಂದ 5ನೇ



R~

ತರಗತಿಗಳನ್ನು ದಿನಾಂಕ:25/10/2021 ರಿಂದ ಅರ್ಧ ದಿನ ಭೌತಿಕವಾಗಿ ಪ್ರಾರಂಭಿಸಿ, ದಿನಾಂಕ:02/11/2021 ರಿಂದ 1 ರಿಂದ 5ನೇ ತರಗತಿಗಳನ್ನು ಪೂರ್ಣ ಅವಧಿಗೆ ಭೌತಿಕವಾಗಿ ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಶಾಲೆಗಳಲ್ಲಿ ತರಗತಿಗಳನ್ನು ಭೌತಿಕವಾಗಿ ಪ್ರಾರಂಭಿಸಿ ಮುಂದುವರೆದಿದೆ.

ಮುಂದುವರೆದಂತೆ ಉಲ್ಲೇಖ-12ರಂತೆ ಈಗಾಗಲೇ ರಾಜ್ಯಾದ್ಯಂತ ಅಂಗನವಾಡಿ ಕೇಂದ್ರಗಳನ್ನು ದಿನಾಂಕ:08/11/2021 ರಿಂದ ಭೌತಿಕವಾಗಿ ಪ್ರಾರಂಭಿಸಲು ಆದೇಶಿಸಿರುವ ಹಿನ್ನೆಲೆಯಲ್ಲಿ ರಾಜ್ಯದಲ್ಲಿನ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಪ್ರಾಥಮಿಕ ಶಾಲೆಗಳಲ್ಲಿನ ಹಾಗೂ ಪೂರ್ವ ಪ್ರಾಥಮಿಕ ಶಾಲೆಗಳಲ್ಲಿನ ಎಲ್‌ಕೆಜಿ ಮತ್ತು ಯುಕೆಜಿ ತರಗತಿಗಳನ್ನು ಪ್ರಾರಂಭಿಸಲು ಶಾಲೆಗಳ ಎಲ್ಲಾ ಶಿಕ್ಷಕರು/ವಿದ್ಯಾರ್ಥಿಗಳಿಗೆ ಕೆಳಕಂಡ ಸೂಚನೆಗಳನ್ನು ಅನ್ವಯಿಸಿಕೊಂಡು ಭೌತಿಕವಾಗಿ ತರಗತಿಗಳನ್ನು ಪ್ರಾರಂಭಿಸಲು ಈ ಕೆಳಗಿನಂತೆ ಕ್ರಮವಹಿಸಲು ಸೂಚಿಸಿದೆ.

- ದಿನಾಂಕ:08/11/2021 ರಿಂದ ಜಾರಿಗೆ ಬರುವಂತೆ ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಶಾಲೆಗಳಲ್ಲಿ ತಮ್ಮ ದೈನಂದಿನ ವೇಳಾಪಟ್ಟಿಯಂತೆ ಎಲ್‌ಕೆಜಿ ಮತ್ತು ಯುಕೆಜಿ ತರಗತಿಗಳನ್ನು ಅರ್ಧ ದಿನ ಭೌತಿಕ ತರಗತಿಗಳನ್ನು ನಡೆಸಲು ಕ್ರಮ ವಹಿಸುವುದು.
- ಕೋವಿಡ್-19ರ ಸೋಂಕಿನ ಪ್ರಮಾಣ 2% ಕ್ಕಿಂತ ಕಡಿಮೆ ಇರುವ ತಾಲ್ಲೂಕುಗಳಲ್ಲಿ ಮಾತ್ರ ಸದರಿ ತರಗತಿಗಳನ್ನು ಭೌತಿಕವಾಗಿ ಪ್ರಾರಂಭಿಸುವುದು.
- ಶಾಲೆಗಳನ್ನು ಪ್ರಾರಂಭಿಸುವ ಪೂರ್ವದಲ್ಲಿ ಸೋಂಕು ನಿವಾರಕಗಳನ್ನು / 1% ಸೋಡಿಯಂ ಹೈಪೋಕ್ಲೋರೈಡ್ ದ್ರಾವಣ ಬಳಸಿ ಸರ್ಕಾರದ ಮಾರ್ಗಸೂಚಿಯಂತೆ ಕಡ್ಡಾಯವಾಗಿ ಶುದ್ಧೀಕರಿಸುವುದು / ಸ್ಯಾನಿಟೈಸ್ ಮಾಡುವುದು
- ಶಾಲೆಗಳಲ್ಲಿ ಹಾಜರಾಗುವ ಎಲ್‌ಕೆಜಿ ಮತ್ತು ಯುಕೆಜಿ ತರಗತಿಯ ಎಲ್ಲಾ ವಿದ್ಯಾರ್ಥಿಗಳು ಪೋಷಕರಿಂದ ಒಪ್ಪಿಗೆ ಪತ್ರ ಕಡ್ಡಾಯವಾಗಿ ತರಬೇಕಿದೆ.
- ಶಾಲೆಗೆ ಹಾಜರಾಗುವ ಎಲ್ಲಾ ಶಿಕ್ಷಕರು ಮತ್ತು ಇತರೆ ಸಿಬ್ಬಂದಿ ಕಡ್ಡಾಯವಾಗಿ ಮಾಸ್ಕ್ ಧರಿಸುವಂತೆ ಎಚ್ಚರಿಕೆ ವಹಿಸಬೇಕು.
- ಶಿಕ್ಷಕರು ಮತ್ತು ಇತರ ಸಿಬ್ಬಂದಿಗಳು ಹಾಗೂ ಪೋಷಕರು ಕಡ್ಡಾಯವಾಗಿ ಎರಡು ಡೋಸ್ ಲಸಿಕೆ ಹಾಕಿಸಿಕೊಂಡಿರಬೇಕು ಮತ್ತು 50 ವರ್ಷ ಮೇಲ್ಪಟ್ಟ ಶಿಕ್ಷಕರು ಹೆಚ್ಚುವರಿಯಾಗಿ ಫೇಸ್ ಶೀಲ್ಡ್ (ಮುಖ ಕವಚ) ಧರಿಸುವುದು ಕಡ್ಡಾಯವಾಗಿ ಪಾಲಿಸತಕ್ಕದ್ದು.
- ಮಕ್ಕಳಿಗೆ ಮನೆಯಿಂದಲೇ ಉಪಹಾರ & ಕುಡಿಯುವ ಶುದ್ಧ ನೀರನ್ನು ಕಳುಹಿಸುವಂತೆ ಎಲ್ಲಾ ಪೋಷಕರಿಗೂ ಕಡ್ಡಾಯವಾಗಿ ತಿಳಿಸುವುದು.
- ಅವಶ್ಯಕತೆ ಅನುಸಾರ ಎಲ್ಲಾ ಶಾಲೆಗಳಲ್ಲಿ ಮಕ್ಕಳಿಗೆ ಕುಡಿಯಲು ಶುದ್ಧ ಬಿಸಿ ನೀರಿನ ವ್ಯವಸ್ಥೆ ಮಾಡುವುದು.
- ಮಕ್ಕಳ ಭೌತಿಕ ಹಾಜರಾತಿಯನ್ನು ಪರಿಗಣಿಸಿ ಪ್ರತಿ ತರಗತಿಯಲ್ಲಿ ಪ್ರತ್ಯೇಕವಾಗಿ ಕುಳಿತುಕೊಳ್ಳಲು ವ್ಯವಸ್ಥೆ ಮಾಡುವುದರೊಂದಿಗೆ ಭೌತಿಕ ಅಂತರವನ್ನು ಕಾಯ್ದುಕೊಳ್ಳುವುದು.
- ಉಲ್ಲೇಖ (10)ರಲ್ಲಿರುವ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸುವುದು. ಪರಸ್ಪರ 1 ಮೀಟರ್ ಭೌತಿಕ ಅಂತರ ಪಾಲಿಸುವಂತೆ ಎಚ್ಚರಿಕೆ ವಹಿಸುವುದು. ಶಾಲೆಯ ಪ್ರವೇಶ ದ್ವಾರದಲ್ಲಿ ಕೋವಿಡ್-19 ರ ಲಕ್ಷಣಗಳ ಕುರಿತು ತಪಾಸಣೆ ಮಾಡುವುದು. ಈ ಸಂದರ್ಭದಲ್ಲಿ ಯಾವುದೇ ವಿದ್ಯಾರ್ಥಿಗೆ ಕೆಮ್ಮು, ಜ್ವರ, ನೆಗಡಿ, ಮೂಗು ಸೋರುವುದು, ಮೈಕೈನೋವು, ಉಸಿರಾಟದ ತೊಂದರೆ ಸಮಸ್ಯೆ, ರುಚಿ ಮತ್ತು ವಾಸನೆಯನ್ನು ಕಳೆದುಕೊಳ್ಳುವ ಲಕ್ಷಣಗಳಿಂದ ಬಳಲುತ್ತಿದ್ದರೆ ಹಾಗೂ ಇತ್ಯಾದಿ ಲಕ್ಷಣಗಳಿದ್ದಲ್ಲಿ ಅವರನ್ನು ಐಸೋಲೇಷನ್ ಕೊಠಡಿಯಲ್ಲಿ ತಾತ್ಕಾಲಿಕವಾಗಿ ಇರಿಸಿ ಅವರ ಪಾಲಕರನ್ನು ಸಂಪರ್ಕಿಸಿ ಅವರ ಮನೆಗೆ ಕಳುಹಿಸತಕ್ಕದ್ದು ಮತ್ತು ಅವರಿಗೆ ಅಗತ್ಯ ಚಿಕಿತ್ಸೆ ಪಡೆದುಕೊಳ್ಳಲು ತಿಳಿಸುವುದು. ಹಾಗೂ ಆರೋಗ್ಯ ಇಲಾಖೆಯ ಸಿಬ್ಬಂದಿಯ ಸಹಕಾರದೊಂದಿಗೆ ನಿಯಮಿತವಾಗಿ ವಿದ್ಯಾರ್ಥಿಗಳ ಆರೋಗ್ಯ ತಪಾಸಣೆಗೆ ಕ್ರಮವಹಿಸುವುದು.
- ಮಕ್ಕಳು ಕೆಮ್ಮುವಾಗ/ಸೀನುವಾಗ ಕರವಸ್ತ್ರದಿಂದ ಬಾಯಿ/ಮೂಗನ್ನು ಮುಚ್ಚಿಕೊಳ್ಳಲು ತಿಳಿಸಬೇಕು.
- ಯಾವುದಾದರೂ ಮಗುವಿನ ಕುಟುಂಬದಲ್ಲಿ ಯಾರಾದರೂ ಕೋವಿಡ್-19 ಪರೀಕ್ಷೆಯಲ್ಲಿ ಪಾಸಿಟಿವ್ ರೋಗ ಲಕ್ಷಣಗಳಾದ ಜ್ವರ, ಕೆಮ್ಮು, ನೆಗಡಿ, ಗಂಟಲು ನೋವು, ಅಥವಾ ಉಸಿರಾಟದ ತೊಂದರೆಗಳಿಂದ ಬಳಲುತ್ತಿದ್ದರೆ ಅಂತಹ ಮಕ್ಕಳನ್ನು ಶಾಲೆಗೆ ಕರೆತರದಂತೆ ನೋಡಿಕೊಳ್ಳುವುದು.
- ಯಾವುದಾದರೂ ಮಗುವಿಗೆ ಕೋವಿಡ್-19 ಪಾಸಿಟೀವ್ ದೃಢಪಟ್ಟಲ್ಲಿ ಶಾಲೆಯ ಉಳಿದ ಎಲ್ಲಾ ಮಕ್ಕಳಿಗೂ ಸಹ ಕೋವಿಡ್-19 ರ ಪರೀಕ್ಷೆಯನ್ನು ಕಡ್ಡಾಯವಾಗಿ ಮಾಡಿಸಿ ದೃಢೀಕರಿಸಿಕೊಳ್ಳುವುದು.
- ನೆಲ ಮತ್ತು ಕೈತೊಳೆಯುವ ಸ್ಥಳದಲ್ಲಿ ನೈರ್ಮಲ್ಯವನ್ನು ಕಾಪಾಡುವುದು ಮತ್ತು ನಿಯತವಾಗಿ ಸೋಂಕು ನಿವಾರಕಗಳನ್ನು/ ಸಾಮಾನ್ಯವಾಗಿ ಬಳಸುವ ಡಿಟರ್ಜೆಂಟ್‌ನಿಂದ / 1% ಸೋಡಿಯಂ ಹೈಪೋಕ್ಲೋರೈಡ್ ದ್ರಾವಣ ಬಳಸಿ ಸರ್ಕಾರದ ಮಾರ್ಗಸೂಚಿಯಂತೆ ಶುದ್ಧೀಕರಿಸುವುದು.



Rr

- ಶಿಕ್ಷಕರಲ್ಲಿ / ವಿದ್ಯಾರ್ಥಿಗಳಲ್ಲಿ ಕೋವಿಡ್-19ರ ಸೋಂಕಿನ ಯಾವುದೇ ಲಕ್ಷಣಗಳಿರುವುದಿಲ್ಲವೆಂಬುದನ್ನು ಖಚಿತಪಡಿಸಿಕೊಂಡಿರಬೇಕು.
- ಶಾಲಾ ವಿದ್ಯಾರ್ಥಿಗಳಲ್ಲಿ ಕೋವಿಡ್~19ರ ಸಾಂಕ್ರಾಮಿಕ ರೋಗವು ಕಂಡುಬಂದಲ್ಲಿ ಶಾಲೆಯನ್ನು ಮುಚ್ಚಿ ಸ್ಯಾನಿಟೈಜ್ ಮಾಡಿ ಸ್ಥಳೀಯ ಆರೋಗ್ಯಾಧಿಕಾರಿಗಳ ಮಾರ್ಗದರ್ಶನದಂತೆ ಅವರು ತಿಳಿಸಿದ ದಿನಗಳ ನಂತರ ಶಾಲೆಯನ್ನು ಪ್ರಾರಂಭಿಸುವುದು.
- ಶಾಲೆ ಪೂರ್ಣವಾಗಿ ಪ್ರಾರಂಭಿಸುವ ಕುರಿತು ಉಲ್ಲೇಖ (2)ರ ಸುತ್ತೋಲೆಯಲ್ಲಿ ನಿಗಧಿಪಡಿಸಿರುವ ಪ್ರಮಾಣಿತ ಕಾರ್ಯಾಚರಣೆ ವಿಧಾನದಂತೆ (ಎಸ್.ಓ.ಪಿ)ಯಂತೆ ಶಿಕ್ಷಕರ / ಮಕ್ಕಳ ಆರೋಗ್ಯ ರಕ್ಷಣೆಗೆ ಎಲ್ಲ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.
- ಶಾಲೆಗೆ ಹಾಜರಾಗುವ ಪ್ರತಿ ಮಗುವಿನ ಆರೋಗ್ಯದ ಬಗ್ಗೆ ನಿಗಾ ವಹಿಸುವುದು.
- ಸಂದರ್ಶಕರಿಗೆ/ಯಾವುದೇ ಮೂರನೇ ವ್ಯಕ್ತಿಗಳಿಗೆ ಶಾಲಾ ಪ್ರವೇಶವನ್ನು ನಿರ್ಬಂಧಿಸಬೇಕು.
- ಸುರಕ್ಷಿತವಾದ ಆಹಾರ ಪದಾರ್ಥ ಮತ್ತು ಶುದ್ಧಕುಡಿಯುವ ನೀರನ್ನು ಹೊರತುಪಡಿಸಿ ಬೇರೆ ಯಾವುದೇ ಪದಾರ್ಥ/ ವಸ್ತುಗಳು ಮಕ್ಕಳ ಬಾಯಿಯ/ಮೂಗಿನ/ಮುಖದ ಸಂಪರ್ಕಕ್ಕೆ ಬಾರದಂತೆ ನಿಗಾವಹಿಸುವುದು.

**ಪೂರ್ವ ಪ್ರಾಥಮಿಕ ಶಾಲೆಗಳಲ್ಲಿನ ಎಲ್‌ಕೆಜಿ ಮತ್ತು ಯುಕೆಜಿ ತರಗತಿಗಳ ನಿರ್ವಹಣೆಗೆ ಸಲಹಾತ್ಮಕ ವೇಳಾಪಟ್ಟಿ**

(ದಿನಾಂಕ: **08/11/2021** ರಿಂದ)

| ದಿನಗಳು | ಸಮಯ | ನಡೆಯುವ ತರಗತಿಗಳು |
|---|---|---|
| ಸೋಮವಾರ ದಿಂದ ಶುಕ್ರವಾರದವರೆಗೆ | ಬೆಳಿಗ್ಗೆ: 09.30 ರಿಂದ ಅಪರಾಹ್ನ: 03:30ರ ಅವಧಿಗೆ ವೇಳಾಪಟ್ಟಿ ನಿಗಧಿ ಪಡಿಸಿಕೊಳ್ಳುವುದು | ಎಲ್‌ಕೆಜಿ ಮತ್ತು ಯುಕೆಜಿ |

- ಮೇಲ್ಕಂಡ ವೇಳಾಪಟ್ಟಿಯನ್ನು ಸಲಹಾತ್ಮಕವಾಗಿ ನೀಡಿದ್ದು, ಸ್ಥಳೀಯ ಸನ್ನಿವೇಶ ಹಾಗೂ ಸಂದರ್ಭಗಳನುಸಾರ ಸೂಕ್ತ ಬದಲಾವಣೆ ಮಾಡಿಕೊಳ್ಳುವ ಅವಕಾಶ ಇರುತ್ತದೆ.
- ಉಲ್ಲೇಖದ ಎಲ್ಲಾ ಸುತ್ತೋಲೆಗಳಲ್ಲಿರುವ ಎಲ್ಲ ಅಂಶಗಳನ್ನು ಗಮನದಲ್ಲಿರಿಸಿಕೊಂಡು ರಾಜ್ಯದಲ್ಲಿನ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಶಾಲೆಗಳಲ್ಲಿ ಅನುಷ್ಠಾನಗೊಳಿಸಲು ಉಪನಿರ್ದೇಶಕರು(ಆಡಳಿತ) ಇವರು ಅಗತ್ಯ ಕ್ರಮವಹಿಸಲು ಸೂಚಿಸಿದೆ.

**ವಿಶೇಷ ಸೂಚನೆ:~**

ಸ್ಯಾನಿಟೈಜರ್/ಸೋಂಕು ನಿವಾರಕ ದ್ರಾವಣಗಳನ್ನು ಮಕ್ಕಳ ಕೈಗೆ ಸಿಗದಂತೆ ಸುರಕ್ಷಿತ ಸ್ಥಳದಲ್ಲಿ ಇಡಬೇಕು. ಕಾರಣವೇನೆಂದರೆ ಅನಿರೀಕ್ಷಿತವಾಗಿ ಸೇವಿಸಿದಲ್ಲಿ ಆರೋಗ್ಯದ ಮೇಲೆ ತೀವ್ರತರವಾದ ಪರಿಣಾಮ ಬೀರುತ್ತದೆ.

**ಕೋವಿಡ್ ಹಿನ್ನೆಲೆಯಲ್ಲಿ ಕಾಲಕಾಲಕ್ಕೆ ಸರ್ಕಾರ, ಇಲಾಖೆ ಮತ್ತು ಜಿಲ್ಲಾಡಳಿತಗಳು ನೀಡುವ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸಲು ತಿಳಿಸಿದೆ.**

**ಸದರಿ ಆದೇಶವು ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಆದೇಶಗಳಂತೆ ಬದಲಾವಣೆಗೆ ಒಳಪಟ್ಟಿರುತ್ತದೆ.**

R. 04/11/2021

ಆಯುಕ್ತರು

ಸಾರ್ವಜನಿಕ ಶಿಕ್ಷಣ ಇಲಾಖೆ.

ಇವರಿಗೆ:~

1. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ ಮತ್ತು ಅಭಿವೃದ್ಧಿ), ಸಾರ್ವಜನಿಕ ಶಿಕ್ಷಣ ಇಲಾಖೆ ಇವರಿಗೆ ಕಳುಹಿಸುತ್ತಾ, ಸರ್ಕಾರದ ಹಾಗೂ ಆರೋಗ್ಯ ಇಲಾಖೆಯ ರಾಜ್ಯ ಕೋವಿಡ್ ತಾಂತ್ರಿಕ ಸಲಹಾ ಸಮಿತಿಯ ನಡವಳಿಯಂತೆ ಕ್ರಮವಹಿಸಲು ತಿಳಿಸಿದೆ.
2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಉಪನಿರ್ದೇಶಕರು (ಆಡಳಿತ ಮತ್ತು ಅಭಿವೃದ್ಧಿ) ರವರ ಮೂಲಕ ಮುಂದಿನ ಕ್ರಮಕ್ಕಾಗಿ,

ಪ್ರತಿಯನ್ನು:~

1. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು ರವರಿಗೆ ಮಾನ್ಯ ಸಚಿವರ ಅವಗಾಹನೆಗೆ ತರಲು ಗೌರವಗಳೊಂದಿಗೆ ಕೋರಿದೆ.

2. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರಿಗೆ ಗೌರವಗಳೊಂದಿಗೆ ಮಾಹಿತಿಗಾಗಿ ಸಲ್ಲಿಸಿದೆ.
3. ಮಾನ್ಯ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ರವರಿಗೆ ಗೌರವಗಳೊಂದಿಗೆ ಮಾಹಿತಿಗಾಗಿ ಸಲ್ಲಿಸಿದೆ.
4. ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಅಭಿಯಾನ, ನೃಪತುಂಗ ರಸ್ತೆ, ಬೆಂಗಳೂರು ರವರಿಗೆ ಗೌರವಗಳೊಂದಿಗೆ ಮಾಹಿತಿಗಾಗಿ ಸಲ್ಲಿಸಿದೆ.
5. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು ರವರಿಗೆ ಮಾಹಿತಿಗಾಗಿ
6. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳಿಗೆ ಮಾಹಿತಿಗಾಗಿ ಹಾಗೂ ಕ್ರಮಕ್ಕಾಗಿ
7. ಆಯುಕ್ತರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು ರವರಿಗೆ ಮಾಹಿತಿಗಾಗಿ
8. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ಬೆಂಗಳೂರು ರವರಿಗೆ ಮಾಹಿತಿಗಾಗಿ
9. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ರವರಿಗೆ ಮಾಹಿತಿಗಾಗಿ
10. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು ರವರಿಗೆ ಮಾಹಿತಿಗಾಗಿ
11. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು ರವರಿಗೆ ಮಾಹಿತಿಗಾಗಿ
12. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು ರವರಿಗೆ ಮಾಹಿತಿಗಾಗಿ.
13. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ / ಕಲಬುರಗಿ ರವರಿಗೆ ಸೂಕ್ತ ಕ್ರಮಕ್ಕಾಗಿ
14. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರುಗಳಿಗೆ ಮಾಹಿತಿಗಾಗಿ ಹಾಗೂ ಕ್ರಮಕ್ಕಾಗಿ
15. ಸಹ ನಿರ್ದೇಶಕರು ಮಧ್ಯಾಹ್ನ ಉಪಹಾರ ಯೋಜನೆ ಬೆಂಗಳೂರು ರವರಿಗೆ ಮಾಹಿತಿಗಾಗಿ ಹಾಗೂ ಕ್ರಮಕ್ಕಾಗಿ
16. ಕಛೇರಿ ಪ್ರತಿ.

ಕರ್ನಾಟಕ ಸರ್ಕಾರ
Government of karnataka
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
DEPARTMENT OF STATE EDUCATIONAL RESEARCH AND TRAINING
No 4, 100 FT RING ROAD, BANASHANKARI 3 RD STAGE BENGALURU - 560 085
Email: dpi.dsert-ka@nic.in Website: http://dsert.kar.nic.in
Phone - 080 26980100
Fax - 080 26422377
ಡಿಎಸ್ಇಆರ್‌ಟಿ DSERT

ಸಂಖ್ಯೆ: ಡಿಎಸ್ಇಆರ್‌ಟಿ/ಇವಿಜಿ/ಶಾ.ಪ್ರಾ.ಪ್ರ.ಕಾ.ವಿ/2021-22 ದಿನಾಂಕ: 16/08/2021

ಸುತ್ತೋಲೆ

ವಿಷಯ : ಕೋವಿಡ್-19ರ ಹಿನ್ನೆಲೆಯಲ್ಲಿ 2021-22ನೇ ಸಾಲಿನಲ್ಲಿ ಶಾಲೆ ಪ್ರಾರಂಭಿಸಲು ಅನುಸರಿಸಬೇಕಾದ ಪ್ರಮಾಣಿತ ಕಾರ್ಯಾಚರಣೆ ವಿಧಾನ (ಎಸ್‌ಒಪಿ) ಕುರಿತು.

ಉಲ್ಲೇಖ : 1) ಕೋವಿಡ್-19ರ ಹಿನ್ನೆಲೆಯಲ್ಲಿ ವಿದ್ಯಾಗಮ /ಶಾಲೆ ಪುನರಾರಂಭಿಸಲು ಪ್ರಮಾಣಿತ ಕಾರ್ಯಾಚರಣೆ ವಿಧಾನ ಕೈಪಿಡಿ 2020-21.
2) ಮಾನ್ಯ ಆಯುಕ್ತರ ಕಛೇರಿ ಪತ್ರ ಸಂಖ್ಯೆ:ಎಡಿಎಂ2(1)/ಶೈ.ವ.ನಿ-01/2021-22, ದಿನಾಂಕ:10/06/2021.
3) ಮಾನ್ಯ ಆಯುಕ್ತರ ಕಛೇರಿ ಪತ್ರ ಸಂಖ್ಯೆ:ಡಿ.ಎಸ್.ಇ.ಆರ್.ಟಿ/ಇವಿಜಿ/1-10/ಮೌಲ್ಯಾಂಕನ/2021/-22, ದಿನಾಂಕ:11/08/2021.
4) ಡಿ.ಎಸ್.ಇ.ಆರ್.ಟಿ/ಇವಿಜಿ/ಪ.ಶೈ.ಕ್ಯಾ/07/2021-22, ದಿನಾಂಕ:30/07/2021

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2020-21ನೇ ಸಾಲಿನಲ್ಲಿ ಕೋವಿಡ್-19ರ ಕಾರಣದಿಂದಾಗಿ ಭೌತಿಕವಾಗಿ ಮುಖಾಮುಖಿಯಾಗಿ ಶಾಲೆಗಳನ್ನು ನಿರಂತರವಾಗಿ ನಡೆಸಲು ಸಾಧ್ಯವಾಗಲಿಲ್ಲ. ಒಂದು ವೇಳೆ ಸೋಂಕು ಕಡಿಮೆಯಾಗಿ ಶಾಲೆ ಪ್ರಾರಂಭಿಸುವ ಸಂದರ್ಭ ಬಂದಲ್ಲಿ ಅಥವಾ ವಿದ್ಯಾಗಮ ಕಾರ್ಯಕ್ರಮ ನಡೆಸುವ ಸಂದರ್ಭದಲ್ಲಿ ಶಾಲಾ ಸುರಕ್ಷಿತ ಹಾಗೂ ಮಕ್ಕಳು ಸುರಕ್ಷಿತವಾಗಿ ಕಲಿಕೆಯಲ್ಲಿ ಭಾಗವಹಿಸುವ ಸಂಬಂಧ ಕೋವಿಡ್-19ರ ಸುರಕ್ಷತಾ ಕ್ರಮಗಳನ್ನು ಅನುಸರಿಸಲು ಉಲ್ಲೇಖ (1)ರಂತೆ ಪ್ರಮಾಣಿತ ಕಾರ್ಯಚರಣೆ ವಿಧಾನ (ಎಸ್‌ಒಪಿ) ಕೈಪಿಡಿಯನ್ನು ತಯಾರಿಸಿ ಶಾಲಾ ಕಛೇರಿಗಳಿಗೆ ಕಳೆದ ಸಾಲಿನಲ್ಲಿ ವಿತರಿಸಲಾಗಿದ್ದು, ಅದರಂತೆ ಕ್ರಮ ಕೈಗೊಳ್ಳಲಾಗಿರುವುದನ್ನು ಸ್ಮರಿಸಲಾಗಿದೆ.

2021-22ನೇ ಸಾಲಿನಲ್ಲಿಯೂ ಕೋವಿಡ್-19ರ ಸೋಂಕು ಮುಂದುವರೆದಿದ್ದು, ಶಾಲೆಗಳನ್ನು ಪ್ರಾರಂಭಿಸಲು ಇದುವರೆಗೂ ಸಾಧ್ಯವಾಗಿರುವುದಿಲ್ಲ. ಪ್ರಸ್ತುತ ಕೋವಿಡ್-19ರ ಸೋಂಕಿನ ಪ್ರಮಾಣ ಕಡಿಮೆಯಾದಲ್ಲಿ ಹಂತ ಹಂತವಾಗಿ ತರಗತಿಗಳನ್ನು ಪುನರ್ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಶಾಲೆಗಳನ್ನು ಪ್ರಾರಂಭಿಸಲು ಸರ್ಕಾರ ಅನುಮತಿ ನೀಡಿದಾಗ ಸುರಕ್ಷಿತವಾಗಿ ಮಕ್ಕಳು ಕಲಿಕೆಯಲ್ಲಿ ಭಾಗವಹಿಸುವಂತೆ ಮಾಡಲು ಈ ಕೆಳಕಂಡಂತೆ ಮುಂಜಾಗ್ರತಾ ಕ್ರಮ ವಹಿಸಲು ಸೂಚಿಸಿದೆ.

## 1. ಶಾಲಾ ಪ್ರಾರಂಭದ ಪೂರ್ವದಲ್ಲಿ ಅನುಸರಿಸಬೇಕಾದ ಕ್ರಮಗಳು:

ಸುಮಾರು ಒಂದೂವರೆ ವರ್ಷಗಳಿಂದ ಶಾಲೆಗಳನ್ನು ತೆರೆಯದಿರುವ ಕಾರಣ ಇಡೀ ಶಾಲೆಯನ್ನು ಸಮಗ್ರವಾಗಿ ಸ್ವಚ್ಛಗೊಳಿಸಿ ಸೋಂಕು ಮುಕ್ತಗೊಳಿಸುವುದು ಅತ್ಯಾದ್ಯತೆಯ ಜವಾಬ್ದಾರಿಯಾಗಿದ್ದು, ಶಾಲಾ ಪ್ರಾರಂಭಕ್ಕೂ ಒಂದು ವಾರ ಮೊದಲು ಶಾಲೆಯನ್ನು ಸ್ವಚ್ಚಗೊಳಿಸುವುದು ಕಡ್ಡಾಯವಾಗಿದೆ.

- ಶಾಲೆಯ ಇಡೀ ಆವರಣ, ಶಾಲಾ ಕಾಂಪೌಂಡ್, ಮುಖ್ಯದ್ವಾರ/ಗೇಟ್, ಮೆಟ್ಟಿಲುಗಳು, ರೈಲಿಂಗ್ಸ್, ಲಿಫ್ಟ್‌ಗಳು ಹಾಗೂ ಕಟ್ಟಡದ ಮೇಲ್ಚಾವಣಿಯಲ್ಲಿನ ಧೂಳು ಒರೆಸಿ ಸೋಂಕು ನಿವಾರಣಾ ದ್ರಾವಣದಿಂದ ತೊಳೆದು ಸ್ವಚ್ಛಗೊಳಿಸುವುದು.
- ಶಾಲೆಯಲ್ಲಿನ ಕುಡಿಯುವ ನೀರಿನ ವ್ಯವಸ್ಥೆಯ ಭಾಗವಾದ ನೀರಿನ ಸಂಪು, ಓವರ್ ಹೆಡ್ ಟ್ಯಾಂಕ್‌ನಲ್ಲಿ ಈಗಾಗಲೇ ಸಂಗ್ರಹವಾಗಿರುವ ನೀರನ್ನು ಖಾಲಿ ಮಾಡಿ, ಕ್ಲೋರಿನ್ ಆಧಾರಿತ ಶುಚಿಗೊಳಿಸುವ ಪೌಡರ್‌ನಿಂದ ಅವುಗಳನ್ನು ಸ್ವಚ್ಚಗೊಳಿಸತಕ್ಕದ್ದು. ಸಂಪು ಮತ್ತು ಓವರ್ ಹೆಡ್ ಟ್ಯಾಂಕ್‌ನ್ನು ಒಂದೆರಡು ದಿನ ಚೆನ್ನಾಗಿ ಒಣಗಿಸಿ ನಂತರ ಸ್ವಚ್ಚ ನೀರನ್ನು ತುಂಬಿಸುವ ಕ್ರಮ ವಹಿಸುವುದು.
- ಶಾಲೆಯಲ್ಲಿನ ಶೌಚಾಲಯ ಮತ್ತು ಮೂತ್ರಾಲಯಗಳನ್ನು 1% ಹೈಪೋಕ್ಲೋರೈಟ್ ದ್ರಾವಣ ಬಳಸಿ ಸ್ವಚ್ಚಗೊಳಿಸತಕ್ಕದ್ದು ಮತ್ತು ಈ ಸೌಲಭ್ಯಗಳು ವಿದ್ಯಾರ್ಥಿಗಳ ಬಳಕೆಗೆ ಲಭ್ಯವಾಗುವಂತೆ ಅವುಗಳನ್ನು ಅಣಿಗೊಳಿಸತಕ್ಕದ್ದು.
- ಶಾಲೆಯಲ್ಲಿನ ಎಲ್ಲ ತರಗತಿ ಕೋಣೆಗಳು, ಮುಖ್ಯೋಪಾಧ್ಯಾಯರ ಕೊಠಡಿ, ಶಿಕ್ಷಕರ ಕೊಠಡಿ, ಪ್ರಯೋಗಾಲಯ, ಗ್ರಂಥಾಲಯ, ಕಂಪ್ಯೂಟರ್‌ಲ್ಯಾಬ್, ಕ್ರೀಡಾ ಕೊಠಡಿ, ಸಭಾಂಗಣ, ಕಾರಿಡಾರ್‌ಗಳನ್ನು ಒಳಗೊಂಡಂತೆ ಶಿಕ್ಷಕರು ಮತ್ತು ಮಕ್ಕಳು ಬಳಸುವ ಸ್ಥಳಗಳನ್ನು ಗುಡಿಸಿ ಸೋಂಕು ನಿವಾರಣಾ ದ್ರಾವಣದಿಂದ (0.5% ಕ್ಲೋರಿನ್ ದ್ರಾವಣ ಅಥವಾ 1% ಹೈಪೋ ಕ್ಲೋರೈಟ್ ದ್ರಾವಣ) ತೊಳೆದು ಸ್ವಚ್ಚಗೊಳಿಸುವುದು.
- ಕೊಠಡಿಗಳನ್ನು ಸ್ವಚ್ಚಗೊಳಿಸುವ ಜೊತೆಗೆ ಕೊಠಡಿಗಳಲ್ಲಿನ ಎಲ್ಲಾ ಪೀಠೋಪಕರಣಗಳು, (ಕುರ್ಚಿ, ಮೇಜು, ಡೆಸ್ಕ್, ಬೆಂಚು, ಶೆಲ್ಫ್, ರ್‍ಯಾಕ್‌ಗಳು ಇತ್ಯಾದಿ) ಪಾಠೋಪಕರಣಗಳು, ಆಟೋಪಕರಣಗಳು, ಬಾಗಿಲು, ಕಿಟಕಿ, ಕಾರಿಡಾರ್‌ಗಳಿಗೆ ಅಳವಡಿಸಿರುವ ಹಿಡಿ, ಚಿಲಕ, ಸರಳುಗಳು, ಇತ್ಯಾದಿಗಳನ್ನು ನೀರಿನಿಂದ ತೊಳೆದು ಸ್ವಚ್ಚಗೊಳಿಸಿ ಸೋಂಕು ನಿವಾರಕಾ ದ್ರಾವಣದಿಂದ (0.5% ಕ್ಲೋರಿನ್ ದ್ರಾವಣ ಅಥವಾ 1% ಹೈಪೋ ಕ್ಲೋರೈಟ್ ದ್ರಾವಣ) ಸ್ಯಾನಿಟೈಸ್ ಮಾಡುವುದು.
- ಅಕ್ಷರ ದಾಸೋಹ ಯೋಜನೆಯಡಿ ಒದಗಿಸಿರುವ ಅಡುಗೆ ಕೋಣೆ, ದಾಸ್ತಾನು ಕೋಣೆಯಲ್ಲಿನ ವಸ್ತುಗಳನ್ನು ಹೊರ ತೆಗೆದು ಪೂರ್ಣ ಪ್ರಮಾಣದಲ್ಲಿ ನೀರಿನಿಂದ ತೊಳೆದು ಒಣಗಿಸಿ (ಡೀಪ್ ಕ್ಲೀನಿಂಗ್) ಬಳಕೆಗೆ ಸಿದ್ದಪಡಿಸತಕ್ಕದ್ದು. ಪಾತ್ರೆಗಳು, ಸ್ಟವ್, ಗ್ಯಾಸ್ ಸಿಲಿಂಡರ್, ಆಹಾರ ಧಾನ್ಯ ಸಂಗ್ರಹಣಾ ಡಬ್ಬಿಗಳು, ತರಕಾರಿ ಬುಟ್ಟಿಗಳು, ಚಾಕುಗಳು, ಸೌಟುಗಳು, ತಟ್ಟೆಗಳು ಇತ್ಯಾದಿ ಅಡುಗೆ ತಯಾರಿಕೆಗೆ ಹಾಗೂ ಬಡಿಸಲು ಉಪಯೋಗಿಸುವ ಎಲ್ಲಾ ಪರಿಕರಗಳನ್ನು ಡಿಟರ್ಜೆಂಟ್ ಬಳಸಿ ಬಿಸಿ ನೀರಿನಿಂದ ತೊಳೆದು ಒಣಗಿಸಿ ಸಿದ್ದಪಡಿಸಿಟ್ಟುಕೊಳ್ಳುವುದು. ಈ ಸಂಬಂಧ ಮಧ್ಯಾಹ್ನ ಉಪಹಾರ ಕಛೇರಿಯಿಂದ ಒದಗಿಸಲಾಗುವ ಅಡುಗೆ ಸುರಕ್ಷತಾ ಕ್ರಮದ ಸುತ್ತೋಲೆಯ ಪ್ರಕಾರ ಕ್ರಮ ವಹಿಸುವುದು.

- ಮಳೆಗಾಲವಾದ್ದರಿಂದ ಶಿಥಿಲ ಕೊಠಡಿ/ಕಟ್ಟಡಗಳಲ್ಲಿ ಮಕ್ಕಳನ್ನು ಕೂರಿಸಬಾರದು ಹಾಗೂ ಮಳೆ ನೀರು ಸಂಗ್ರಹವಾಗುವುದು, ಕಟ್ಟಡ ಸೋರುವುದು, ಇತರೆ ದುರಸ್ಥಿ ಇದ್ದಲ್ಲಿ ಅಗತ್ಯ ಕ್ರಮವಹಿಸುವುದು.
- ಹೆಚ್ಚಿನ ಮಾಹಿತಿಗಾಗಿ ಕೇಂದ್ರ ಸರ್ಕಾರದ ಆರೋಗ್ಯ ಇಲಾಖೆಯು ಹೊರಡಿಸಿರುವ ಪ್ರಮಾಣಿತ ಕಾರ್ಯಚರಣಾ ವಿಧಾನ (ಎಸ್ ಓ ಪಿ) ಯಲ್ಲಿನ ಮಾರ್ಗಸೂಚಿಗಳನ್ನು ಅನುಸರಿಸುವುದು. ಮಾಹಿತಿಯನ್ನು http:www.mohw.gov.in/pdf/Guidelines ondisinfectionofcommonpublicplacesincludingoffices.pdf ನಲ್ಲಿ ಪಡೆಯಬಹುದಾಗಿದೆ.

**2. ಶಾಲೆಯಲ್ಲಿ ವಿದ್ಯಾರ್ಥಿಗಳ ನಡುವೆ ದೈಹಿಕ/ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳಲು ಅನುಸರಿಸಬೇಕಾದ ಅಂಶಗಳು.**

ವಿದ್ಯಾರ್ಥಿಗಳು ಶಾಲೆಗೆ ಆಗಮಿಸುವ ಸಮಯದಿಂದ ಶಾಲೆಯಿಂದ ನಿರ್ಗಮಿಸುವವರೆಗೆ ಪ್ರತಿ ಹಂತದಲ್ಲಿಯೂ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳುವಂತೆ ಅಗತ್ಯ ಕ್ರಮಗಳನ್ನು ಶಾಲೆಯ ಮುಖ್ಯ ಶಿಕ್ಷಕರು ಮತ್ತು ಎಲ್ಲಾ ಶಿಕ್ಷಕರು ಈ ಕೆಳಕಂಡಂತೆ ನಿರ್ವಹಿಸಲು ಕ್ರಮ ಕೈಗೊಳ್ಳತಕ್ಕದ್ದು.

- ಶಾಲಾ ಆವರಣದ ಗೇಟಿನ ಮೂಲಕ ವಿದ್ಯಾರ್ಥಿಗಳು ಪ್ರವೇಶಿಸುವ ಜಾಗದಲ್ಲಿ ಕನಿಷ್ಠ 3 ರಿಂದ 6 ಅಡಿಗಳ ಅಂತರದಲ್ಲಿ ವೃತ್ತ/ಬಾಕ್ಸ್‌ಗಳನ್ನು ಗುರುತು ಮಾಡಿರಬೇಕು. ವಿದ್ಯಾರ್ಥಿಗಳು ಒಂದು ವೃತ್ತದಿಂದ ಮತ್ತೊಂದು ವೃತ್ತಕ್ಕೆ ನಿಯಮಿತ ಅಂತರವನ್ನು ಅನುಸರಿಸಿ ಚಲಿಸುವಂತೆ ವಿದ್ಯಾರ್ಥಿಗಳಲ್ಲಿ ಅಭ್ಯಾಸ ಮಾಡಿಸಬೇಕು.
- ದಟ್ಟಣೆಯನ್ನು ತಪ್ಪಿಸಲು ಆಗಮನ ಮತ್ತು ನಿರ್ಗಮನಕ್ಕೆ ಪ್ರತ್ಯೇಕ ಮಾರ್ಗಗಳನ್ನು ಗುರುತಿಸುವುದು ಹಾಗೂ ವಿದ್ಯಾರ್ಥಿಗಳಿಗೆ ಶಾಲೆಗೆ ಆಗಮಿಸುವ ಮತ್ತು ನಿರ್ಗಮಿಸುವ ಸಮಯವನ್ನು ನಿಗದಿಗೊಳಿಸುವುದು.
- ಶಾಲೆಗೆ ಆಗಮಿಸಲು ಮತ್ತು ನಿರ್ಗಮಿಸಲು ಹಲವು ದ್ವಾರಗಳಿದ್ದಲ್ಲಿ, ಎಲ್ಲವನ್ನು ತೆರೆದಿಟ್ಟು, ದಟ್ಟಣೆಯನ್ನು ಕಡಿಮೆ ಮಾಡತಕ್ಕದ್ದು.
- ಶಾಲೆಗೆ ಆಗಮಿಸುವ ವಿದ್ಯಾರ್ಥಿ/ಪಾಲಕರಿಗೆ ಸಾಮಾಜಿಕ ಅಂತರ ಕಾಪಾಡಿಕೊಳ್ಳಲು ಸೂಚನೆಗಳನ್ನು ನೀಡತಕ್ಕದ್ದು.
- ಶಾಲೆಯ ಪ್ರಮುಖ ಕಡೆಗಳಲ್ಲಿ ಸಾಮಾಜಿಕ ಅಂತರ ಪಾಲಿಸಲು ನೆನಪಿಸುವ ಪೋಸ್ಟರ್‌ಗಳನ್ನು/ಸೂಚನಾ ಫಲಕಗಳನ್ನು ಅಂಟಿಸತಕ್ಕದ್ದು.
- ವಿದ್ಯಾರ್ಥಿಗಳು ಆವರಣವನ್ನು ಪ್ರವೇಶಿಸುತ್ತಿದ್ದಂತೆ ಹ್ಯಾಂಡ್ ಸ್ಯಾನಿಟೈಸರ್‌ನಿಂದ ಅಥವಾ ಸಾಬೂನಿನಿಂದ ಅವರ ಕೈಗಳನ್ನು ಸ್ವಚ್ಛಗೊಳಿಸಿಕೊಳ್ಳಲು ಅವಕಾಶ ಕಲ್ಪಿಸತಕ್ಕದ್ದು. ಥರ್ಮಲ್ ಸ್ಕ್ಯಾನರ್‌ನಿಂದ ವಿದ್ಯಾರ್ಥಿಗಳ ದೇಹದ ಉಷ್ಣತೆ ಪರೀಕ್ಷಿಸುವುದು.
- ವಿದ್ಯಾರ್ಥಿಗಳು ಶಾಲಾ ಆವರಣವನ್ನು ಪ್ರವೇಶಿಸುವ ಸಂದರ್ಭದಲ್ಲಿ ಯಾವುದೇ ವಿದ್ಯಾರ್ಥಿಗೆ ಕೆಮ್ಮು, ಜ್ವರ, ನೆಗಡಿ, ಮೂಗು ಸೋರುವುದು ಇತ್ಯಾದಿ ಲಕ್ಷಣಗಳಿದ್ದಲ್ಲಿ ಅವರನ್ನು ಐಸೋಲೇಷನ್ ಕೊಠಡಿಯಲ್ಲಿ ತಾತ್ಕಾಲಿಕವಾಗಿ ಇರಿಸಿ ಅವರ ಪಾಲಕರನ್ನು ಸಂಪರ್ಕಿಸಿ ಅವರ ಮನೆಗೆ ಕಳುಹಿಸತಕ್ಕದ್ದು ಮತ್ತು ಅವರಿಗೆ ಅಗತ್ಯ ಚಿಕಿತ್ಸೆ ಪಡೆದುಕೊಳ್ಳಲು ಕ್ರಮವಹಿಸುವುದು ಹಾಗೂ ಆರೋಗ್ಯ ಇಲಾಖೆಯ ಸಿಬ್ಬಂದಿಯ ಸಹಕಾರದೊಂದಿಗೆ ನಿಯಮಿತವಾಗಿ ವಿದ್ಯಾರ್ಥಿಗಳ ಆರೋಗ್ಯ ತಪಾಸಣೆಗೆ ಕ್ರಮವಹಿಸುವುದು.
- ಪ್ರತಿ ವಿದ್ಯಾರ್ಥಿಯಿಂದ ಅವರ ದಿನನಿತ್ಯದ ಆರೋಗ್ಯ ಸ್ಥಿತಿಯ ವಿವರಗಳನ್ನು ಪಡೆದುಕೊಳ್ಳಲು ಕ್ರಮ ವಹಿಸುವುದು.

- ವಿದ್ಯಾರ್ಥಿಗಳು ವೃತ್ತಗಳಲ್ಲೇ ಚಲಿಸಿ ತಮ್ಮ ತರಗತಿ ಕೋಣೆಗಳನ್ನು ಪ್ರವೇಶಿಸಬೇಕು. ತರಗತಿ ಕೋಣೆಯಲ್ಲಿ ಸಹ ವಿದ್ಯಾರ್ಥಿಗಳಿಗೆ ಕುಳಿತುಕೊಳ್ಳಲು ಸಾಮಾಜಿಕ ಅಂತರವನ್ನು ಕಾಪಾಡಿಕೊಳ್ಳುವಂತೆ ಬೆಂಚ್‌ಗಳ ಮೇಲೆ ವೃತ್ತಗಳನ್ನು ಗುರುತು ಮಾಡಿರಬೇಕು. ಕೊಠಡಿಯಲ್ಲಿನ ಬೆಂಚ್‌ಗಳ ಉದ್ದವನ್ನು ಆಧರಿಸಿ ಪ್ರತಿ ಬೆಂಚ್‌ಗೆ ಒಬ್ಬರು ಅಥವಾ ಇಬ್ಬರು ವಿದ್ಯಾರ್ಥಿಗಳನ್ನು ಕುಳಿತುಕೊಳ್ಳಲು ವ್ಯವಸ್ಥೆಯನ್ನು ಕಲ್ಪಿಸತಕ್ಕದ್ದು. ಬೆಂಚ್‌ಗಳ ನಡುವೆ ಸಹ ಕನಿಷ್ಟ ಅಂತರವನ್ನು ಕಾಪಾಡಿಕೊಳ್ಳಬೇಕು.
- ವಿದ್ಯಾರ್ಥಿಗಳಿಗೆ ಅವರಿಗೆ ಅವಶ್ಯವಿರುವ ಕುಡಿಯುವ ನೀರು ಮತ್ತು ಆಹಾರವನ್ನು ಅವರವರ ಮನೆಯಿಂದ ತರುವಂತೆ ಸೂಚಿಸುವುದು.
- ಅವಶ್ಯಕತೆ ಅನುಸಾರ ಶಾಲೆಗಳಲ್ಲಿ ಮಕ್ಕಳಿಗೆ ಕುಡಿಯಲು ಶುದ್ಧ ಬಿಸಿ ನೀರಿನ ವ್ಯವಸ್ಥೆ ಮಾಡುವುದು.
- ಶಾಲೆಯ ಗ್ರಂಥಾಲಯ, ಪ್ರಯೋಗಾಲಯ, ಕಂಪ್ಯೂಟರ್ ಲ್ಯಾಬ್, ಒಳಾಂಗಣ ಕ್ರೀಡಾಂಗಣ ಮುಂತಾದ ಕಡೆಗಳಲ್ಲಿಯೂ ಸಹ ವಿದ್ಯಾರ್ಥಿಗಳು ಸಾಮಾಜಿಕ ಅಂತರವನ್ನು ಕಾಪಾಡಿಕೊಂಡು ಕಲಿಕೆಯಲ್ಲಿ ಭಾಗವಹಿಸುವ ವ್ಯವಸ್ಥೆಯನ್ನು ಮಾಡತಕ್ಕದ್ದು.
- ಶಾಲೆಯಲ್ಲಿ ವಿದ್ಯಾರ್ಥಿಗಳು ಅನಗತ್ಯವಾಗಿ (ಪುಸ್ತಕ, ಡಸ್ಟರ್, ಚಾಕ್ ಪೀಸ್) ವಸ್ತುಗಳನ್ನು ಹಾಗೂ ಸ್ನೇಹಿತರನ್ನು ಮುಟ್ಟಬಾರದು ಮತ್ತು ಪರಸ್ಪರ ವಿನಿಮಯ ಮಾಡದಂತೆ ನೋಡಿಕೊಳ್ಳತಕ್ಕದ್ದು.
- ಶೌಚಾಲಯವನ್ನು ಉಪಯೋಗಿಸಿದ ನಂತರ ಶೌಚಾಲಯವನ್ನು ನೀರಿನಿಂದ ಸ್ವಚ್ಛಗೊಳಿಸಿ ನಂತರ ತಮ್ಮ ಕೈಗಳನ್ನು ಸೋಪಿನಿಂದ/ಸ್ಯಾನಿಟೈಸರ್‌ನಿಂದ ತೊಳೆದುಕೊಂಡು ತಮ್ಮದೇ ನ್ಯಾಪ್‌ಕಿನ್‌ನಿಂದ ಒರೆಸಿಕೊಳ್ಳುವ ಅಭ್ಯಾಸವನ್ನು ವಿದ್ಯಾರ್ಥಿಗಳಿಗೆ ಮಾಡಿಸತಕ್ಕದ್ದು.
- ವಿದ್ಯಾರ್ಥಿಗಳು ಶಾಲೆಗೆ ಶಾಲಾ ಬಸ್ ಮೂಲಕ ಸಂಚರಿಸುತ್ತಿದ್ದಲ್ಲಿ ಬಸ್ ಹತ್ತುವ ಹಾಗೂ ಇಳಿಯುವ ಸಂದರ್ಭದಲ್ಲಿಯೂ ಸಹ ಸಾಮಾಜಿಕ ಅಂತರವನ್ನು ಕಾಪಾಡಿಕೊಳ್ಳಬೇಕು. ಅಗತ್ಯವಿದ್ದಲ್ಲಿ ಬಸ್ ಹತ್ತುವ ಮತ್ತು ಇಳಿಯುವ ಸ್ಥಳಗಳಲ್ಲಿ ಬಾಕ್ಸ್‌ಗಳನ್ನು ಗುರುತು ಮಾಡತಕ್ಕದ್ದು. ವಿದ್ಯಾರ್ಥಿಗಳು ಶಾಲಾ ಬಸ್ ಹತ್ತುವ ಮತ್ತು ಇಳಿಯುವ ಸಂದರ್ಭದಲ್ಲಿ ಶಿಕ್ಷಕರು ಹಾಗೂ ಸಿಬ್ಬಂದಿ ಮೇಲ್ವಿಚಾರಣೆ ಮಾಡುವುದು.
- ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಮುಖ್ಯ ಶಿಕ್ಷಕರು, ಶಾಲಾ ಬಸ್ ಚಾಲಕರು ಮತ್ತು ಸಹಾಯಕರು ಕಡ್ಡಾಯವಾಗಿ ಮಾಸ್ಕ್ ಧರಿಸಿರುವುದನ್ನು ಖಚಿತಪಡಿಸಿಕೊಳ್ಳುವುದು.

**3. ಮುಖ್ಯಶಿಕ್ಷಕರು ಮತ್ತು ಶಿಕ್ಷಕರು ವಹಿಸಬೇಕಾದ ಕ್ರಮಗಳು:**

- ಮುಖ್ಯಶಿಕ್ಷಕರು ಮತ್ತು ಶಿಕ್ಷಕರು ಕಡ್ಡಾಯವಾಗಿ ಮಾಸ್ಕ್ ಧರಿಸಿ ಶಾಲೆಗೆ ಹಾಜರಾಗಬೇಕು.
- 50 ವರ್ಷ ಮೀರಿದ ಶಿಕ್ಷಕರು ಮಾಸ್ಕ್ ಜೊತೆಗೆ ಫೇಸ್ ಶೀಲ್ಡ್‌ನ್ನು ಧರಿಸುವುದು ಒಳಿತು.
- ಅಗ್ಗಿಂದಾಗ್ಗೆ ಸಾಬೂನು/ಸ್ಯಾನಿಟೈಜರ್‌ನಿಂದ ಕೈತೊಳೆದುಕೊಳ್ಳುವುದು.
- ಶಾಲೆಯಲ್ಲಿ /ತರಗತಿ ಕೊಠಡಿಗಳಲ್ಲಿ ದೈಹಿಕ/ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳಬೇಕು.
- ಮುಖ್ಯಶಿಕ್ಷಕರು ಅವರನ್ನೊಳಗೊಂಡಂತೆ ಶಾಲೆಯ ಎಲ್ಲಾ ಶಿಕ್ಷಕರಿಗೂ ಒಂದು ಬಾರಿ ಕೋವಿಡ್ ಲಸಿಕೆ ಪಡೆದಿದ್ದಾರೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವುದು. ಲಸಿಕೆ ಪಡೆಯದಿದ್ದಲ್ಲಿ ಶೀಘ್ರವಾಗಿ ಕೊಡಿಸಲು ಕ್ರಮ ವಹಿಸುವುದು. ಕೋವಿಡ್-19 ಲಸಿಕೆಯ 2ನೇ ಡೋಸ್ ಅನ್ನು ಆದಷ್ಟು ಶೀಘ್ರವಾಗಿ ಪಡೆಯಲು ಪ್ರಯತ್ನಿಸುವುದು.

- ಶಿಕ್ಷಕರು, ಮುಖ್ಯ ಶಿಕ್ಷಕರು ಹಾಗೂ ಸಿಬ್ಬಂದಿಯಲ್ಲಿ ಯಾರಿಗಾದರೂ ಕೋವಿಡ್–19 ಸೋಂಕಿನ ಲಕ್ಷಣಗಳಿದ್ದಲ್ಲಿ ಅಂತಹವರು ಶಾಲೆಗೆ ಹಾಜರಾಗಬಾರದು ಮತ್ತು ವಿಷಯವನ್ನು ಇಲಾಖಾ ಅಧಿಕಾರಿಗಳ ಗಮನಕ್ಕೆ ತಂದು ರಜೆ ಪಡೆಯುವುದು. ಪುನಃ ಶಾಲಾ ಕರ್ತವ್ಯಕ್ಕೆ ಹಾಜರಾಗುವ ಮೊದಲು ಮೂರು ದಿನ ಮುಂಚಿತವಾಗಿ ಆರ್.ಟಿ.ಪಿ.ಸಿ.ಆರ್ ಕೋವಿಡ್–19ರ ಪರೀಕ್ಷೆ ಮಾಡಿಸಿ ನೆಗೆಟಿವ್ ರಿಪೋರ್ಟ್‌ನ್ನು ಸಲ್ಲಿಸುವುದು.
- ಕೋವಿಡ್–19 ಸುರಕ್ಷತಾ ಕ್ರಮಗಳ ಪ್ರಕಾರ ಶಾಲಾ ಕಾರ್ಯ ನಿರ್ವಹಿಸುವ ಸಂಬಂಧ ತಪಾಸಣಾ ಪಟ್ಟಿ ತಯಾರಿಸಲಾಗಿದ್ದು, ಅನುಬಂಧ ದಲ್ಲಿ ನೀಡಲಾಗಿದೆ. ಅದರ ಪ್ರಕಾರ ಪ್ರತಿದಿನ ಪರಿಶೀಲಿಸಿ ದೃಢಪಡಿಸಿಕೊಳ್ಳತಕ್ಕದ್ದು.
- ಮಕ್ಕಳನ್ನು ಶಾಲೆಗೆ ಕಳುಹಿಸಲು ಕಡ್ಡಾಯವಾಗಿ ಲಿಖಿತವಾಗಿ ಪೋಷಕರಿಂದ ಒಪ್ಪಿಗೆ ಪತ್ರವನ್ನು ಪಡೆಯುವುದು.
- ವಿದ್ಯಾರ್ಥಿಗಳ ಪಾಲಕರು, ಎಸ್.ಡಿ.ಎಂ.ಸಿ ಸದಸ್ಯರು, ದಾನಿಗಳು ಮತ್ತು ಸಾರ್ವಜನಿಕರು ಶಾಲೆಗೆ ಭೇಟಿ ನೀಡಲು ಸಮಯವನ್ನು ನಿಗದಿಪಡಿಸಿ ಅವರನ್ನು ಶಾಲಾ ಕಛೇರಿಯಲ್ಲಿ ಮಾತ್ರ ಭೇಟಿಯಾಗಲು ತಿಳಿಸುವುದು. ಸಾರ್ವಜನಿಕರು ಶಾಲಾ ಭೇಟಿಯ ಸಂದರ್ಭದಲ್ಲಿ ಮಾಸ್ಕ್ ಧರಿಸಿ, ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳುವುದು ಕಡ್ಡಾಯ. ಇವರುಗಳು ಶಾಲಾ ತರಗತಿಗಳಿಗೆ ಪ್ರವೇಶಿಸುವುದನ್ನು ನಿರ್ಬಂಧಿಸತಕ್ಕದ್ದು.
- ಪ್ರತಿದಿನ ಶಾಲೆ ಪ್ರಾರಂಭದಿಂದ ಶಾಲೆ ಮುಕ್ತಾಯವಾಗುವವರೆಗೂ ಕೋವಿಡ್–19 ರ ಪ್ರಮಾಣಿತ ಕಾರ್ಯಚರಣಾ ವಿಧಾನವನ್ನು ಎಲ್ಲಾ ಹಂತಗಳಲ್ಲಿಯೂ ಕಡ್ಡಾಯವಾಗಿ ಅನುಸರಣೆ ಮಾಡಲಾಗುತ್ತಿದೆಯೇ ಎಂಬುದನ್ನು ಮೇಲ್ವಿಚಾರಣೆ ಮಾಡಲು ಹಾಗೂ ದೃಢಪಡಿಸಿಕೊಳ್ಳಲು ಒಬ್ಬ ಶಿಕ್ಷಕರನ್ನು ನೋಡಲ್ ಅಧಿಕಾರಿಯಾಗಿ ನೇಮಿಸುವುದು. ಈ ಶಿಕ್ಷಕರು ಪ್ರತಿದಿನ ಮುಖ್ಯಶಿಕ್ಷಕರಿಗೆ ವರದಿ ಸಲ್ಲಿಸುವುದು.
- ವಿದ್ಯಾರ್ಥಿಗಳನ್ನು ಒಂದು ಕಡೆ ಗುಂಪುಗೂಡಿಸುವಂತಹ ಸಭೆಗಳು, ಸಮಾರಂಭಗಳು, ಹಬ್ಬಗಳು ಹಾಗೂ ಇತರೆ ಚಟುವಟಿಕೆಗಳನ್ನು ಹಮ್ಮಿಕೊಳ್ಳಬಾರದು.

## 4. ವಿದ್ಯಾರ್ಥಿಗಳಲ್ಲಿ ಕೋವಿಡ್–19 ಸೋಂಕು ತಗುಲದಂತೆ ವಹಿಸಬೇಕಾದ ಮುನ್ನೆಚ್ಚರಿಕಾ ಅಭ್ಯಾಸಗಳನ್ನು ರೂಢಿಸುವುದು.

- ವಿದ್ಯಾರ್ಥಿಗಳಲ್ಲಿ ದೈಹಿಕ/ಸಾಮಾಜಿಕ ಅಂತರವನ್ನು ಎಲ್ಲ ಸಂದರ್ಭದಲ್ಲಿಯೂ ಕಾಪಾಡಿಕೊಳ್ಳುವುದು.
- ಆಗಾಗ್ಗೆ ತಮ್ಮ ಕೈಗಳನ್ನು ಸೋಪಿನಿಂದ ಅಥವಾ ಸ್ಯಾನಿಟೈಜರ್‌ನಿಂದ ಸ್ವಚ್ಛಗೊಳಿಸುವುದು.
- ಕೆಮ್ಮುವಾಗ ಅಥವಾ ಸೀನುವಾಗ ಬಾಯಿಗೆ ಅಡ್ಡವಾಗಿ ಕರವಸ್ತ್ರವನ್ನು ಅಥವಾ ಮೊಣಕೈಯನ್ನು ಅಡ್ಡ ಹಿಡಿಯುವುದು.
- ಶಾಲೆಯಲ್ಲಿ ಮತ್ತು ರಸ್ತೆಯಲ್ಲಿ ಓಡಾಡುವಾಗ ಅನಗತ್ಯವಾಗಿ ಯಾವುದೇ ವಸ್ತುಗಳನ್ನು ಮುಟ್ಟದಂತೆ ಹಾಗೂ ರಸ್ತೆ ಬದಿಯ ತೆರೆದಿಟ್ಟ ಆಹಾರಗಳನ್ನು ಸೇವಿಸದಂತೆ ಅರಿವು ಮೂಡಿಸುವುದು.
- ರಸ್ತೆಯಲ್ಲಿ/ಶಾಲಾ ಆವರಣದಲ್ಲಿ ಎಲ್ಲೆಂದರಲ್ಲಿ ಉಗುಳದಂತೆ ಜಾಗೃತಿ ಮೂಡಿಸುವುದು. (ಶಾಲಾ ಚಾಲಕರು ಸೇರಿದಂತೆ)

a

• ವಿದ್ಯಾರ್ಥಿಗಳು ಯಾವಾಗಲೂ ಮಾಸ್ಕ್ ಧರಿಸಿರಬೇಕು. ಬಳಸಿ ಎಸೆಯುವ ಮಾಸ್ಕ್ ಧರಿಸಿದಲ್ಲಿ ಪುನಃ ಬಳಸಬಾರದು. ಬಟ್ಟೆಯಿಂದ ತಯಾರಿಸಲಾದ ಮಾಸ್ಕ್‌ಗಳನ್ನು ಬಳಸುತ್ತಿದ್ದಲ್ಲಿ ಅದನ್ನು ಶುಭ್ರವಾಗಿ ಸ್ವಚ್ಛಗೊಳಿಸಿದ ನಂತರವೇ ಪುನಃ ಬಳಸುವುದು.

• ಬಳಸಿದ ಮಾಸ್ಕ್‌ಗಳನ್ನು ಮತ್ತು ನ್ಯಾಪ್‌ಕಿನ್‌ಗಳನ್ನು ಎಲ್ಲೆಂದರಲ್ಲಿ ಎಸೆಯುವುದು ಮತ್ತು ಸ್ನೇಹಿತರೊಂದಿಗೆ ಹಂಚಿಕೊಳ್ಳಬಾರದು. ಉಪಯೋಗಿಸಿದ ಮಾಸ್ಕ್, ಟಿಸ್ಯೂ ಪೇಪರ್ ಅನ್ನು ಮುಚ್ಚಿ ಕಸದ ಬುಟ್ಟಿಯಲ್ಲೇ ಹಾಕುವಂತೆ ಮಾಡುವುದು.

• ವಿದ್ಯಾರ್ಥಿಗಳ ರೋಗ ಪ್ರತಿರೋಧಕ ಶಕ್ತಿಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ವ್ಯಾಯಾಮ, ಯೋಗ, ಸರಳ ಪ್ರಾಣಾಯಾಮಗಳನ್ನು ಸಾಮಾಜಿಕ ಅಂತರದೊಂದಿಗೆ ಮಾಡಿಸುವುದು ಹಾಗೂ ಮನೆಯಲ್ಲಿಯೂ ಮಾಡುವಂತೆ ಪ್ರೇರೇಪಿಸುವುದು.

• ವಿದ್ಯಾರ್ಥಿಗಳು ಮನೆಯಿಂದಲೇ ಉಪಹಾರ/ಊಟವನ್ನು ಹಾಗೂ ಕುಡಿಯಲು ಕಾಯಿಸಿ ಆರಿಸಿದ ನೀರನ್ನು ಬಾಟಲ್‌ನಲ್ಲಿ ತರಲು ತಿಳಿಸುವುದು. ಯಾವುದೇ ಕಾರಣಕ್ಕೂ ವಿದ್ಯಾರ್ಥಿಗಳು ಸಹಪಾಠಿಗಳೊಂದಿಗೆ ಆಹಾರ/ಕುಡಿಯುವ ನೀರನ್ನು ಹಂಚಿಕೊಳ್ಳಬಾರದು.

• ಕುಡಿಯಲು ನೀರು ತರದಿದ್ದ ಮಕ್ಕಳಿದ್ದಲ್ಲಿ/ ಕುಡಿಯುವ ನೀರು ಖಾಲಿಯಾಗಿದ್ದಲ್ಲಿ ಶಾಲೆಯಲ್ಲಿ ಕಾಯಿಸಿ ಆರಿಸಿದ ಶುದ್ಧ ಕುಡಿಯುವ ನೀರನ್ನು ನೀಡುವ ವ್ಯವಸ್ಥೆ ಮಾಡತಕ್ಕದ್ದು.

• ದೈಹಿಕ ಸ್ವಾಸ್ಥ್ಯ ಹೆಚ್ಚಿಸುವ ಆರೋಗ್ಯಕರ ಹಾಗೂ ಬಿಸಿಯಾದ ಆಹಾರ ಪದಾರ್ಥಗಳನ್ನು ಬಳಸುವಂತೆ ವಿದ್ಯಾರ್ಥಿಗಳಿಗೆ ಸೂಚಿಸಬೇಕು. ಶೀತಲಿಕರಿಸಿದ ಆಹಾರವನ್ನು ಸೇವಿಸಬಾರದು ಎಂದು ತಿಳಿಸುವುದು.

• ವಿದ್ಯಾರ್ಥಿಗಳು ತಮಗೆ ಸಂಬಂಧಿಸಿದ ಯಾವುದೇ ಸಾಮಾಗ್ರಿಗಳನ್ನು (ಪಠ್ಯಪುಸ್ತಕ, ನೋಟ್‌ಪುಸ್ತಕ, ಪೆನ್, ಪೆನ್ಸಿಲ್, ರಬ್ಬರ್, ಟಿಫಿನ್‌ಬಾಕ್ಸ್, ನೀರಿನ ಬಾಟಲ್ ಇತ್ಯಾದಿ.) ಪರಸ್ಪರ ಹಂಚಿಕೊಳ್ಳಬಾರದು.

## 5. ಸಮುದಾಯದ ಸಹಭಾಗಿತ್ವದೊಂದಿಗೆ ಶಾಲೆ ನಡೆಸುವುದು.

- ಮುಖ್ಯ ಶಿಕ್ಷಕರು ಶಾಲಾ ಪ್ರಾರಂಭಕ್ಕೂ ಒಂದು ವಾರ ಮೊದಲು ಎಸ್.ಡಿ.ಎಂ.ಸಿ/ಶಾಲಾ ಆಡಳಿತ ಮಂಡಳಿ/ಪೋಷಕರ ಸಭೆಯನ್ನು ಕರೆದು ಶಾಲಾ ಪ್ರಾರಂಭ ಮತ್ತು ನಂತರದಲ್ಲಿ ಕೋವಿಡ್-19ರ ಹಿನ್ನೆಲೆಯಲ್ಲಿ ಶಾಲೆಯಲ್ಲಿ ಅನುಸರಿಸಲಾಗುವ ಕ್ರಮಗಳ ಕುರಿತು ಅವರಿಗೆ ಮನವರಿಕೆ ಮಾಡಿಕೊಡಬೇಕು. ಅವರೂ ಸಹ ತಮ್ಮ ಗ್ರಾಮದ/ವಾರ್ಡ್‌ನ ವಿದ್ಯಾರ್ಥಿಗಳ ಶಿಕ್ಷಣದಲ್ಲಿ ಪಾಲುದಾರರಾಗುವಂತೆ ಕೋರುವುದು.
- ಕೋವಿಡ್-19 ತಡೆಗಟ್ಟಲು ವಿದ್ಯಾರ್ಥಿಗಳು ಅನುಸರಿಸಬೇಕಾದ ಕ್ರಮಗಳು, ಶಾಲೆಯ ಅವಧಿ, ಶಾಲೆಯ ಸ್ವಚ್ಛತೆ ಮತ್ತು ವಿದ್ಯಾರ್ಥಿಗಳಿಗೆ ಒದಗಿಸಬೇಕಾದ ಸೌಲಭ್ಯಗಳ ಸವಿವರ ಮಾಹಿತಿಯನ್ನು ಎಸ್.ಡಿ.ಎಂ.ಸಿ. ಸದಸ್ಯರಿಗೆ ನೀಡಿ ಅವರ ಮೂಲಕ ವಿದ್ಯಾರ್ಥಿಗಳ ಪಾಲಕರು ಅಗತ್ಯ ಸಹಕಾರ ನೀಡುವಂತೆ ಅವರಿಗೆ ಮನವರಿಕೆ ಮಾಡಿಕೊಡಲು ಕೋರುವುದು.
- ಶಾಲಾ ಆವರಣದ ಶುಚಿತ್ವ ಮತ್ತು ಶಾಲೆಯಲ್ಲಿನ ಸೌಲಭ್ಯಗಳ ನಿರ್ವಹಣೆಗೆ ಸದಸ್ಯರ ಸಹಕಾರ ಮತ್ತು ನೆರವನ್ನು ಕೋರುವುದು.
- ವಿದ್ಯಾರ್ಥಿಗಳು ಶಾಲೆಗೆ ಹಾಜರಾಗುವಾಗ ಅನುಸರಿಸಬೇಕಾದ ಮುನ್ನೆಚ್ಚರಿಕಾ ಕ್ರಮಗಳ ಬಗ್ಗೆ ಅವರ ಪಾಲಕರಿಗೆ ಮನವರಿಕೆ ಮಾಡಿಕೊಡುವಂತೆ ಕೋರುವುದು.
- ಎಸ್.ಡಿ.ಎಂ.ಸಿ. ಸಭೆಯ ನಂತರ ತರಗತಿವಾರು ವಿದ್ಯಾರ್ಥಿಗಳ ಪಾಲಕರ ಸಭೆಯನ್ನು ಕರೆದು ಕೋವಿಡ್-19 ತಡೆಗಟ್ಟುವಲ್ಲಿ ವಿದ್ಯಾರ್ಥಿಗಳು ವಹಿಸಬೇಕಾದ ಕ್ರಮಗಳ ಬಗ್ಗೆ ಅವರಿಗೆ ಮನವರಿಕೆ ಮಾಡಿಕೊಟ್ಟು ಅವರ ಸಹಕಾರವನ್ನು ಕೋರುವುದು.

- ಮಾಸ್ಕ್, ಸ್ಯಾನಿಟೈಜರ್, ಸೋಪ್ ಇತ್ಯಾದಿಗಳನ್ನು ಅಗತ್ಯವಾದಲ್ಲಿ ಸಮುದಾಯ, ಪಾಲಕರು ಮತ್ತು ದಾನಿಗಳಿಂದ ಪಡೆದುಕೊಳ್ಳಲು ಕ್ರಮವಹಿಸತಕ್ಕದ್ದು.
- ಶಾಲೆಯಲ್ಲಿ/ಶಾಲೆಯ ಸಂಪರ್ಕಿಸಬಹುದಾದ ದೂರದಲ್ಲಿ ವೈದ್ಯಕೀಯ ಸಿಬ್ಬಂದಿ ಲಭ್ಯವಿರುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು. ಅಂತಹ ವೈದ್ಯಕೀಯ ಸಿಬ್ಬಂದಿಯ ದೂರವಾಣಿ ಸಂಖ್ಯೆಯನ್ನು ಶಾಲೆಯ ಸೂಚನಾಫಲಕದಲ್ಲಿ ಪ್ರದರ್ಶಿಸುವುದು.
- ಶಾಲೆಯನ್ನು ಪುನರಾರಂಭಿಸಲು ಶಾಲೆಯನ್ನು ಸ್ವಚ್ಛಗೊಳಿಸುವ ಕಾರ್ಯಕ್ಕಾಗಿ ಸ್ಥಳೀಯ ಗ್ರಾಮ ಪಂಚಾಯಿತಿ/ಪಟ್ಟಣ ಪಂಚಾಯಿತಿ/ಪುರಸಭೆ/ತಾಲ್ಲೂಕು ಪಂಚಾಯಿತಿ/ನಗರಸಭೆ /ಬಿ.ಬಿ.ಎಂ.ಪಿ ನಗರ ಪ್ರದೇಶಗಳಾಗಿದ್ದಲ್ಲಿ ಆಯಾ ನಗರಸಭೆಯನು ಸಂಪರ್ಕಿಸಿ ಅವರ ನೆರವನ್ನು ಪಡೆದುಕೊಳ್ಳುವುದು.

## 6. ಸುರಕ್ಷತೆಯೊಂದಿಗೆ ಕಲಿಕೆ.

- ಉಲ್ಲೇಖ (2) ರ ದಿನಾಂಕ:10/06/2021ರ ಸುತ್ತೋಲೆಯಲ್ಲಿ ತಿಳಿಸಿರುವ ರೀತಿಯಲ್ಲಿ ಶಾಲಾ ಬೋಧನಾ ಕಲಿಕಾ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು. ಉಲ್ಲೇಖ (3)ರ ದಿನಾಂಕ:11/08/2021ರ ಸುತ್ತೋಲೆಯಲ್ಲಿ ತಿಳಿಸಿರುವ ಪ್ರಕಾರ ಮೌಲ್ಯಮಾಪನ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು.
- 2021-22ನೇ ಶೈಕ್ಷಣಿಕ ಸಾಲಿನಲ್ಲಿ ಡಿ.ಎಸ್.ಇ.ಆರ್.ಟಿ ವತಿಯಿಂದ ಆಗಸ್ಟ್-2021 ಮಾಹೆಯಿಂದ ಏಪ್ರಿಲ್-2022 ಮಾಹೆಯವರೆಗೂ ವಾರ್ಷಿಕ ಪಠ್ಯವನ್ನು ವಿಂಗಡಿಸಿ ತರಗತಿವಾರು, ವಿಷಯವಾರು ಮತ್ತು ಮಾಧ್ಯಮವಾರು ಪರ್ಯಾಯ ಶೈಕ್ಷಣಿಕ ಯೋಜನೆಯನ್ನು ತಯಾರಿಸಿ ಪ್ರತಿ ತಿಂಗಳು ಡಿ.ಎಸ್.ಇ.ಆರ್.ಟಿ ವೆಬ್‌ಸೈಟ್: http://dsert.kar.nic.in ನಲ್ಲಿ ಅಪ್‌ಲೋಡ್ ಮಾಡಲಾಗುತ್ತಿದೆ. ಈ ಸಂಬಂಧ ಉಲ್ಲೇಖ (4)ರ ದಿನಾಂಕ:30/07/2021ರಲ್ಲಿ ನೀಡಿರುವ ಸುತ್ತೋಲೆಯಂತೆ ಶೈಕ್ಷಣಿಕ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು.
- ಶಾಲಾ ಹಾಜರಾತಿ ಕಡ್ಡಾಯ ಮಾಡದೆ, ಈ ಪರಿಸ್ಥಿತಿಯಲ್ಲಿ ವಿದ್ಯಾರ್ಥಿಗಳು ಮಾಡಬೇಕಾದ/ ಮಾಡಬಾರದ ವಿಷಯಗಳ ಬಗ್ಗೆ ತಿಳಿಸಿಕೊಡತಕ್ಕದ್ದು.
- ತಮ್ಮ ಪುಸ್ತಕ, ನೋಟ್ ಪುಸ್ತಕ, ಪೆನ್, ಪೆನ್ಸಿಲ್, ಜಾಮಿಟ್ರಿ ಬಾಕ್ಸ್ ಇತ್ಯಾದಿ ಕಲಿಕಾ ಸಾಮಗ್ರಿಗಳನ್ನು ತಮ್ಮ ಸ್ನೇಹಿತರೊಂದಿಗೆ ಹಂಚಿಕೊಳ್ಳದೇ, ಪ್ರತ್ಯೇಕವಾಗಿ ಕಲಿಕೆಯಲ್ಲಿ ಭಾಗವಹಿಸುವುದು.
- ಪ್ರಾರಂಭದಲ್ಲಿಯೇ ವಿದ್ಯಾರ್ಥಿಗಳು ಈ ಸಾಲಿನಲ್ಲಿ ಕಲಿಯಬೇಕಿರುವ ಪಠ್ಯಕ್ರಮ, ಕಲಿಕಾ ವಿಧಾನ, ಕಲಿಕೆಗೆ ಅಗತ್ಯ ಸಮಯ ಮತ್ತು ಮೌಲ್ಯಮಾಪನ ವಿಧಾನ ಕುರಿತು ಅವರಿಗೆ ಮನವರಿಕೆ ಮಾಡಿಕೊಡತಕ್ಕದ್ದು.
- ಶಿಕ್ಷಕರು ತಾವು ತರಗತಿಯಲ್ಲಿ ಬೋಧಿಸಬೇಕಿರುವ ಮತ್ತು ವಿದ್ಯಾರ್ಥಿಗಳು ತಮ್ಮ ಮನೆಯಲ್ಲಿ ಸ್ವಕಲಿಕೆಯಲ್ಲಿ ತೊಡಗಬಹುದಾದ ಪಾಠಗಳ ಬಗ್ಗೆ ಮನವರಿಕೆ ಮಾಡಿಕೊಡತಕ್ಕದ್ದು.
- ಬೋಧನೆ/ಕಲಿಕೆಗೆ ವಿಭಿನ್ನ ವಿಧಾನ/ಸಂಪನ್ಮೂಲಗಳನ್ನು ಬಳಸಿಕೊಳ್ಳಬಹುದು - ಸಹಪಾಠಿ ಕಲಿಕೆ, ಅಭ್ಯಾಸ ಪುಸ್ತಕಗಳ ಬಳಕೆ, ಅಭ್ಯಾಸ ಹಾಳೆಗಳು, ಮಾಹೆವಾರು ಪರ್ಯಾಯ ಶೈಕ್ಷಣಿಕ ಯೋಜನೆಗಳು, ತಂತ್ರಜ್ಞಾನ ಆಧರಿತ ಸಂಪನ್ಮೂಲಗಳು (ದೀಕ್ಷಾ ಮತ್ತು ಡಿ.ಎಸ್.ಇ.ಆರ್.ಟಿ ಯೂ-ಟ್ಯೂಬ್‌ನಲ್ಲಿ ಅಳವಡಿಸಿರುವ ವೀಡಿಯೋ ಪಾಠಗಳು, ವೀಡಿಯೋ ಕ್ಲಿಪ್ಪಿಂಗ್‌ಗಳು, ಪ್ರಶ್ನಾಕೋಠಿ ಇತ್ಯಾದಿ).
- ಬೋಧನೆ-ಕಲಿಕೆಯೊಂದಿಗೆ ಜೀವನ ಕೌಶಲಗಳನ್ನು ಮಿಳಿತಗೊಳಿಸತಕ್ಕದ್ದು.

9

- ನಿತ್ಯದ ಗೃಹಪಾಠದ ಬದಲಾಗಿ ಆಸಕ್ತಿ ಉಂಟುಮಾಡುವ, ಕುತೂಹಲಕಾರಿ ಮತ್ತು ಸಮಸ್ಯೆ ಪರಿಹಾರ ವಿಧಾನಗಳನ್ನು ಅನುಸರಿಸತಕ್ಕದ್ದು.
- ವಿಶೇಷ ಅಗತ್ಯವುಳ್ಳ ಮಕ್ಕಳ ಕಲಿಕೆಯ ಅಗತ್ಯಗಳನ್ನು ಪರಿಗಣಿಸಿ ಅವರಿಗೆ ಅಗತ್ಯ ನೆರವು ಕಲ್ಪಿಸತಕ್ಕದ್ದು.
- ಲಭ್ಯ ತಂತ್ರಾಂಶಗಳು ಮತ್ತು ಇ-ಸಂಪನ್ಮೂಲಗಳನ್ನು ಅವರಿಗೆ ದೊರಕಿಸತಕ್ಕದ್ದು.

ಈ ಕುರಿತು ಸರ್ಕಾರದಿಂದ ಆಗಿಂದಾಗ್ಗೆ ಯಾವುದಾದರೂ ಹೆಚ್ಚುವರಿ ನಿರ್ದೇಶನಗಳು ಬಂದಲ್ಲಿ ಅವುಗಳನ್ನೂ ಸಹ ಪಾಲಿಸುವುದು.

ಮೇಲೆ ವಿವರಿಸಿರುವ ರೀತಿಯಲ್ಲಿ ಎಲ್ಲಾ ಸುರಕ್ಷತಾ ಕ್ರಮಗಳನ್ನು ಕೈಗೊಂಡು ವಿದ್ಯಾರ್ಥಿಗಳು ನಿರಂತರವಾಗಿ ಕಲಿಕಾ ಚಟುವಟಿಕೆಗಳಲ್ಲಿ ತೊಡಗುವಂತೆ ಮಾಡುವ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಳ್ಳಲು ತಿಳಿಸಿದೆ. ಹಾಗೂ **ಕೋವಿಡ್-19 ರ ಹಿನ್ನೆಲೆಯಲ್ಲಿ ಕಾಲದಿಂದ ಕಾಲಕ್ಕೆ ಸರ್ಕಾರ, ಇಲಾಖೆ ಮತ್ತು ಜಿಲ್ಲಾಡಳಿತಗಳ ನೀಡುವ ಮಾರ್ಗಸೂಚಿಗಳನ್ನು ಮತ್ತು ನಿರ್ದೇಶನಗಳನ್ನು ಕಡ್ಡಾಯವಾಗಿ ಪಾಲಿಸುವುದು.**

**ಸದರಿ ಪ್ರಮಾಣಿತ ಕಾರ್ಯಾಚರಣೆ ವಿಧಾನ (ಎಸ್‌ಓಪಿ)ಯು ತಾತ್ಕಾಲಿಕವಾಗಿದ್ದು, ಕೋವಿಡ್-19ರ ಹಿನ್ನೆಲೆಯಲ್ಲಿ ಮುಂದಿನ ದಿನಗಳಲ್ಲಿನ ವಾಸ್ತವ ಸ್ಥಿತಿಗಳ ಅನುಸಾರ ಬದಲಾವಣೆಗೆ ಒಳಪಟ್ಟಿರುತ್ತದೆ.**

(ವಿ. ಅನ್ಬುಕುಮಾರ್)
ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು

ಗೆ,

1. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಹಾಗೂ ಉಪನಿರ್ದೇಶಕರು (ಅಭಿವೃದ್ಧಿ)ರವರಿಗೆ ಅಗತ್ಯ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಹಾಗೂ ಕ್ಷೇತ್ರ ಸಮನ್ವಯಾಧಿಕಾರಿಗಳಿಗೆ ಉಪನಿರ್ದೇಶಕರು (ಆಡಳಿತ) ರವರ ಮೂಲಕ ಅಗತ್ಯ ಕ್ರಮಕ್ಕಾಗಿ.
3. ರಾಜ್ಯದ ಎಲ್ಲಾ ಶಾಲೆಗಳ ಮುಖ್ಯ ಶಿಕ್ಷಕರಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ ಅಗತ್ಯ ಕ್ರಮಕ್ಕಾಗಿ

**ಪ್ರತಿಯನ್ನು:-**

1. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು ರವರಿಗೆ ಗೌರವಗಳೊಂದಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರಿಗೆ ಗೌರವಗಳೊಂದಿಗೆ ಮಾಹಿತಿಗಾಗಿ ಸಲ್ಲಿಸಿದೆ.
3. ಮಾನ್ಯ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ರವರಿಗೆ ಮಾಹಿತಿಗಾಗಿ
4. ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಅಭಿಯಾನ, ನೃಪತುಂಗ ರಸ್ತೆ, ಬೆಂಗಳೂರು ರವರಿಗೆ ಮಾಹಿತಿಗಾಗಿ ಹಾಗೂ ಕ್ರಮಕ್ಕಾಗಿ
5. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು ರವರಿಗೆ ಮಾಹಿತಿಗಾಗಿ
6. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳಿಗೆ ಮಾಹಿತಿಗಾಗಿ ಹಾಗೂ ಕ್ರಮಕ್ಕಾಗಿ
7. ಆಯುಕ್ತರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು ರವರಿಗೆ ಮಾಹಿತಿಗಾಗಿ

10. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು ರವರಿಗೆ ಮಾಹಿತಿಗಾಗಿ
11. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು ರವರಿಗೆ ಮಾಹಿತಿಗಾಗಿ
12. ಆಯುಕ್ತರು, ಸಾರಿಗೆ ಇಲಾಖೆ, ಬೆಂಗಳೂರು ರವರಿಗೆ ಮಾಹಿತಿಗಾಗಿ
13. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ / ಕಲಬುರಗಿ ರವರಿಗೆ ಸೂಕ್ತ ಕ್ರಮಕ್ಕಾಗಿ
14. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರುಗಳಿಗೆ ಮಾಹಿತಿಗಾಗಿ ಹಾಗೂ ಕ್ರಮಕ್ಕಾಗಿ
15. ಸಹ ನಿರ್ದೇಶಕರು ಮಧ್ಯಾಹ್ನ ಉಪಹಾರ ಯೋಜನೆ ಬೆಂಗಳೂರು ರವರಿಗೆ ಮಾಹಿತಿಗಾಗಿ ಹಾಗೂ ಕ್ರಮಕ್ಕಾಗಿ
16. ಕಛೇರಿ ಪ್ರತಿ

## ಅನುಬಂಧ

## ಸುರಕ್ಷಿತ ಶಾಲಾ ಪರಿಸರಕ್ಕಾಗಿ ತಪಶೀಲು ಪಟ್ಟಿ

### ೧. ಶಾಲಾ ಆಡಳಿತಾಧಿಕಾರಿಗಳು, ಶಿಕ್ಷಕರು ಮತ್ತು ಇತರ ಸಿಬ್ಬಂದಿಗಳ ಪರಿಶೀಲನಾಪಟ್ಟಿ

| ಕ್ರ.ಸಂ. | ಕಾರ್ಯ | ಹೌದು/ ಇಲ್ಲ |
|---|---|---|
| **ಎ** | **ಆರೋಗ್ಯಕರ ನೈರ್ಮಲ್ಯ ಅಭ್ಯಾಸಗಳನ್ನು ಉತ್ತೇಜಿಸಲಾಗುತ್ತದೆ ಮತ್ತು ಖಾತ್ರಿಪಡಿಸಲಾಗುತ್ತದೆ** | |
| ೧ | ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಗಳು ಉತ್ತಮ ವೈಯಕ್ತಿಕ ನೈರ್ಮಲ್ಯದ ಅಭ್ಯಾಸಗಳು ಮತ್ತು ಸರಿಯಾದ ಕೈ ತೊಳೆಯುವ ತಂತ್ರ (ಕನಿಷ್ಟ ೪೦ ಸೆಕೆಂಡುಗಳು) ಬಗ್ಗೆ ಸಂವೇದನೆ ಹೊಂದಿದ್ದಾರೆ | |
| ೨ | ಆರೋಗ್ಯಕರ ನೈರ್ಮಲ್ಯ ಅಭ್ಯಾಸಗಳ ಸಂಕೇತಗಳನ್ನು ತರಗತಿ ಕೊಠಡಿಗಳು, ಕಾರಿಡಾರ್‌ಗಳು, ವಾಶ್ ರೂಂಗಳು, ಸ್ವಾಗತ ಪ್ರದೇಶ, ಇತ್ಯಾದಿ ಸ್ಥಳಗಳಲ್ಲಿ ಪ್ರದರ್ಶಿಸಲಾಗಿದೆ | |
| | • ಕೈ ಕುಲುಕುವುದನ್ನು ನಿಲ್ಲಿಸಿ - ಇತರ ಸಂಪರ್ಕ ರಹಿತ ವಿಧಾನಗಳನ್ನು ಬಳಸಿ ಶುಭಾಶಯಗಳನ್ನು ವಿನಿಮಯ ಮಾಡಿಕೊಳ್ಳುವುದು | |
| | • ನಿಯಮಿತ ವಿರಾಮ ಸಮಯದಲ್ಲಿ ಕೈ ತೊಳೆಯಿರಿ (ಕನಿಷ್ಟ ೪೦ ಸೆಕೆಂಡುಗಳು) | |
| | • ಮುಖ ಮುಟ್ಟಿಕೊಳ್ಳುವುದನ್ನು ತಪ್ಪಿಸಿ. ಕೆಮ್ಮುವಾಗ ಮತ್ತು ಸೀನುವಾಗ ಕೈ ಅಡ್ಡ ಹಿಡಿಯಿರಿ. | |
| ೩ | ಹುಡುಗಿಯರು ಮತ್ತು ಹುಡುಗರಿಗೆ ಸಾಕಷ್ಟು ಸ್ವಚ್ಛವಾದ ಮತ್ತು ಪ್ರತ್ಯೇಕ ಶೌಚಾಲಯಗಳು | |
| ೪ | ವಯಸ್ಸಿಗೆ ಅನುಗುಣವಾಗಿ ನಿರ್ಮಿಸಲಾದ ಕೈತೊಳೆಯುವ ಸ್ಥಳಗಳಲ್ಲಿ ಸೋಪು ಮತ್ತು ಶುದ್ಧವಾದ ನೀರಿನ ಲಭ್ಯತೆ. | |
| ೫ | ಶಾಲೆಗಳಲ್ಲಿ ಸೂಕ್ತ ಪ್ರಮಾಣದಲ್ಲಿ ಸೋಪು, ಹ್ಯಾಂಡ್ ಸ್ಯಾನಿಟೈಜರ್, ಡಿಜಿಟಲ್ ಥರ್ಮಾಮೀಟರ್ ಮುಂತಾದ ಪ್ರಮುಖ ವಸ್ತುಗಳ ಲಭ್ಯತೆ. | |
| ೬ | ದೈನಂದಿನ ಬೋಧನೆಯಲ್ಲಿ ಆರೋಗ್ಯ ಮತ್ತು ನೈರ್ಮಲ್ಯದ ಪಾಠಗಳ ಸಂಯೋಜನೆ | |
| ೭ | ಪ್ರತಿದಿನಕ್ಕೆ ಒಂದು ಬಾರಿಯಾದರೂ ಶಾಲಾ ಕಟ್ಟಡ, ತರಗತಿ ಕೋಣೆಗಳು, ಅಡುಗೆ ಮನೆ, ನೀರು ಮತ್ತು ಶೌಚಾಲಯ, ಶಾಲಾ ಸಾರಿಗೆ ವ್ಯವಸ್ಥೆ, ಸಾಮಾನ್ಯವಾಗಿ ಜನರು ಮುಟ್ಟುವ ವಸ್ತುಗಳ ಮೇಲ್ಮೈ (ಬೆಂಚು, ಕಂಬಿಗಳು, ಬಾಗಿಲು ಹಿಡಿ, ಸ್ವಿಚ್‌ಗಳು, ಊಟದ ಟೇಬಲ್‌ಗಳು, ಕ್ರೀಡೋಪಕರಣಗಳು, ಕಿಟಕಿಗಳ ಹಿಡಿಕೈ, ಗೊಂಬೆಗಳು, ಪಾಠೋಪಕರಣಗಳು ಇತ್ಯಾದಿ) ಸ್ವಚ್ಛಗೊಳಿಸುವುದು ಮತ್ತು ಸೋಂಕು ನಿವಾರಣೆ ಮಾಡುವುದು | |
| ೮ | ಶಾಲೆಯ ಆವರಣದಲ್ಲಿ ಸಾಕಷ್ಟು ಗಾಳಿಯ ಹರಿವು ಮತ್ತು ಬೆಳಕಿನ ವ್ಯವಸ್ಥೆಯ ಲಭ್ಯತೆ | |
| ೯ | ಶಾಲೆಯಲ್ಲಿ ಎಲ್ಲಾ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳ ನಿಯಮಿತ ಆರೋಗ್ಯ ತಪಾಸಣೆ | |
| ೧೦ | ಪ್ರತಿದಿನ ಕಸವನ್ನು ಗುಡಿಸಿ ಸಂಗ್ರಹಿಸಿ, ಸುರಕ್ಷಿತವಾಗಿ ವಿಲೇವಾರಿ ಮಾಡಲಾಗುತ್ತದೆ | |
| ೧೧ | ಕೋವಿಡ್-೧೯ ನಿರ್ವಹಣೆಗಾಗಿ ಪ್ರತ್ಯೇಕವಾಗಿ ಒಂದು ಕೊಠಡಿ (ಐಸೋಲೇಷನ್ ರೂಂ)ಯನ್ನು ಸಿದ್ಧಪಡಿಸಿಟ್ಟುಕೊಳ್ಳುವುದು | |
| ೧೨ | ಶಾಲೆಯು ತುರ್ತು ಸಂದರ್ಭದಲ್ಲಿ ವ್ಯವಹರಿಸಲು ಹತ್ತಿರದ ಆಸ್ಪತ್ರೆಯೊಂದಿಗೆ ಸಂಪರ್ಕ ಹೊಂದಿದೆ | |
| **ಬಿ** | **ದೈಹಿಕ / ಸಾಮಾಜಿಕ ಅಂತರದ ಕ್ರಮಗಳನ್ನು ಜಾರಿಗೆ ತರಲಾಗಿದೆ** | |
| ೧ | ಜನದಟ್ಟಣಾ ಪರಿಸ್ಥಿತಿ ಉಂಟಾಗದಂತೆ ಶಾಲಾ ವ್ಯವಸ್ಥೆಗಳನ್ನು ಮಾಡಲಾಗಿದೆ. | |
| ೨ | ವಿದ್ಯಾರ್ಥಿಗಳು ಕುಳಿತುಕೊಳ್ಳುವ ಬೆಂಚ್‌ಗಳ ನಡುವೆ ಸಾಕಷ್ಟು ಅಂತರವನ್ನು ನೀಡಲಾಗಿದೆ. | |

## 2. ಪೋಷಕರಿಗಾಗಿ ತಪಶೀಲು ಪಟ್ಟಿ

| ಕ್ರ.ಸಂ. | ಕಾರ್ಯ | ಹೌದು/ಇಲ್ಲ |
|---|---|---|
| ೧ | ನಿಯಮಿತವಾಗಿ ಮಗುವಿನ ಆರೋಗ್ಯವನ್ನು ಗಮನಿಸಲಾಗುತ್ತಿದೆ. | |
| ೨ | ಮಗುವು ಅನಾರೋಗ್ಯದಿಂದ ಬಳಲುತ್ತಿದ್ದರೆ ಅಥವಾ ಯಾವುದೇ ನಿರ್ದಿಷ್ಟ ವೈದ್ಯಕೀಯ ಸಮಸ್ಯೆಯನ್ನು ಹೊಂದಿದ್ದರೆ ಅಂತಹ ಮಗುವನ್ನು ಮನೆಯಲ್ಲಿ ಇರಿಸುವುದು ಮತ್ತು ಸೂಕ್ತ ವೈದ್ಯಕೀಯ ನೆರವನ್ನು ಪಡೆಯುವುದು. | |
| ೩ | ಮನೆಯಲ್ಲಿ ಉತ್ತಮ ನೈರ್ಮಲ್ಯ ಅಭ್ಯಾಸಗಳನ್ನು ಕಲಿಸುವುದು ಮತ್ತು ರೂಪಿಸುವುದು. | |
| | • ಕೈಗಳನ್ನು ಆಗಾಗ್ಗೆ ಸೋಪು ಮತ್ತು ನೀರಿನಿಂದ ತೊಳೆಯುವುದು ಅಥವಾ ಕನಿಷ್ಟ ೭೦% ಆಲ್ಕೋಹಾಲ್ ಹೊಂದಿರುವ ಸ್ಯಾನಿಟೈಜರ್‌ನ್ನು ಕೈ ಸ್ವಚ್ಛಗೊಳಿಸಲು ಬಳಸುವುದು. | |
| | • ಶುದ್ಧ ಕುಡಿಯುವ ನೀರಿನ ಲಭ್ಯತೆ ಖಾತ್ರಿಪಡಿಸಿಕೊಳ್ಳುವುದು | |
| | • ಮನೆಯಲ್ಲಿ ಸ್ವಚ್ಛವಾದ ಶೌಚಾಲಯಗಳ ಲಭ್ಯತೆ ಖಾತ್ರಿಪಡಿಸಿಕೊಳ್ಳುವುದು | |
| | • ಮನೆಯಲ್ಲಿ ಸುರಕ್ಷಿತ ಕ್ರಮದಲ್ಲಿ ತ್ಯಾಜ್ಯ ಸಂಗ್ರಹಿಸಿ ವಿಲೇವಾರಿ ಮಾಡುವುದನ್ನು ಖಚಿತಪಡಿಸಿಕೊಳ್ಳುವುದು. | |
| | • ಟಿಶ್ಯು ಕಾಗದ ಅಥವಾ ಮೊಣಕೈ ಬಳಸಿ ಕೆಮ್ಮುವುದು ಮತ್ತು ಸೀನುವುದು ಹಾಗೂ ಪದೇ ಪದೇ ಮುಖ, ಕಣ್ಣು, ಮೂಗು, ಬಾಯಿಯನ್ನು ಮುಟ್ಟುವುದನ್ನು ತಪ್ಪಿಸುವುದು. | |
| ೪ | ನಿಮ್ಮ ಮಗುವಿನ ಭಾವನಾತ್ಮಕ ಸುರಕ್ಷತೆಯನ್ನು ವಿಭಿನ್ನ ಮಾರ್ಗಗಳ ಮೂಲಕ ಖಚಿತಪಡಿಸಿಕೊಳ್ಳುವುದು. | |
| ೫ | ಪರಿಸ್ಥಿತಿಯನ್ನು ಬಳಸಿಕೊಂಡು ನಿಂದಿಸುವುದನ್ನು ತಪ್ಪಿಸಿ ಹಾಗೂ ಇತರರೊಂದಿಗೆ ವಿವೇಚನೆಯಿಂದ ವರ್ತಿಸುವಂತೆ ತಿಳಿ ಹೇಳಿ. | |
| ೬ | ಮಾಹಿತಿಯನ್ನು ಸ್ವೀಕರಿಸಲು ಶಾಲೆಯೊಂದಿಗೆ ಉತ್ತಮ ಸಹಕಾರ ನೀಡುವುದು | |
| ೭ | ಶಾಲೆಯ ಸುರಕ್ಷತಾ ಪ್ರಯತ್ನಗಳನ್ನು ಬಲಪಡಿಸಲು ಶಾಲೆಗೆ ಬೆಂಬಲವನ್ನು ನೀಡಿ | |

## ೩. ಮಕ್ಕಳಿಗಾಗಿ ತಪಶೀಲು ಪಟ್ಟಿ

| ಕ್ರ.ಸಂ. | ಕಾರ್ಯ | ಹೌದು/ ಇಲ್ಲ |
|---|---|---|
| ೧ | ಇತರರೊಂದಿಗೆ ಮಾತನಾಡುವ ಮತ್ತು ಹಂಚಿಕೊಳ್ಳುವ ಮೂಲಕ ನೀವು ಒತ್ತಡದ ಪರಿಸ್ಥಿತಿಯನ್ನು ತಪ್ಪಿಸುವುದು ಮತ್ತು ನಿಮ್ಮನ್ನು ಮತ್ತು ನಿಮ್ಮ ಶಾಲೆಯನ್ನು ಸುರಕ್ಷಿತವಾಗಿ ಮತ್ತು ಆರೋಗ್ಯವಾಗಿಡಲು ಸಹಾಯ ಮಾಡಿ. | |
| ೨ | ನಿಮ್ಮನ್ನು ಮತ್ತು ಇತರರನ್ನು ನೀವು ಈ ಮೂಲಕ ರಕ್ಷಿಸುತ್ತೀರಿ: | |
| | • ನಿಯಮಿತವಾಗಿ ಕೈಗಳನ್ನು ಸೋಪು ಮತ್ತು ಶುದ್ಧವಾದ ನೀರಿನಿಂದ ಕನಿಷ್ಟ ೪೦ ಸೆಕೆಂಡ್ ಗಳ ವರೆಗೆ ತೊಳೆಯುವುದು. | |
| | • ಮುಖವನ್ನು ಪದೇ ಪದೇ ಮುಟ್ಟದಿರುವುದು. | |
| | • ಇತರರೊಂದಿಗೆ ಮಾಸ್ಕ್, ಲೋಟಗಳನ್ನು, ಊಟದ ಬಾಕ್ಸ್ ಗಳನ್ನು, ಆಹಾರ ಅಥವಾ ಪಾನೀಯಗಳನ್ನು ಹಂಚಿಕೊಳ್ಳದಿರುವುದು. | |

a

| | | |
|---|---|---|
| 3 | ನಿಮ್ಮನ್ನು, ನಿಮ್ಮ ಶಾಲೆ, ಕುಟುಂಬ ಮತ್ತು ಸಾಮುದಾಯಿಕ ಆರೋಗ್ಯವನ್ನು ಉಳಿಸಿಕೊಳ್ಳುವಲ್ಲಿ ನೀವು ನಾಯಕರಾಗಿ ಕಾರ್ಯನಿರ್ವಹಿಸುತ್ತೀರಿ | |
| | • ರೋಗವನ್ನು ತಡೆಗಟ್ಟುವ ಬಗ್ಗೆ ನೀವು ಕಲಿತದ್ದನ್ನು ನಿಮ್ಮ ಕುಟುಂಬ ಮತ್ತು ಸ್ನೇಹಿತರೊಂದಿಗೆ, ವಿಶೇಷವಾಗಿ ಕಿರಿಯರೊಂದಿಗೆ ಹಂಚಿಕೊಳ್ಳುವುದು | |
| | • ಮೊಣಕೈಯನ್ನು ಬಳಸಿ ಸೀನುವುದು ಅಥವಾ ಕೆಮ್ಮುವುದು, ಕೈಗಳನ್ನು ತೊಳೆಯುವುದು ಮುಂತಾದ ಉತ್ತಮ ಅಭ್ಯಾಸಗಳನ್ನು ರೂಪಿಸಿಕೊಂಡು ಮಾದರಿಯಾಗುವುದು. (ವಿಶೇಷವಾಗಿ ಕಿರಿಯರಿಗೆ) | |
| ೪ | ನೀವು ಅನಾರೋಗ್ಯದಿಂದಿರುವ ನಿಮ್ಮ ಗೆಳೆಯರೊಂದಿಗೆ ಅಥವಾ ಯಾರನ್ನೂ ನಿಂದಿಸಬೇಡಿ. | |
| ೫ | ನಿಮಗೆ ಅನಾರೋಗ್ಯವಿದ್ದರೆ, ನಿಮ್ಮ ಪೋಷಕರಿಗೆ, ಕುಟುಂಬದ ಇನ್ನೊಬ್ಬ ಸದಸ್ಯರಿಗೆ ಅಥವಾ ಪಾಲನೆ ಮಾಡುವವರಿಗೆ ಹೇಳಿ ಮತ್ತು ಮನೆಯಲ್ಲೇ ಇರುವುದಾಗಿ ತಿಳಿಸಿ. | |